# ಪುನೀತ ಚಾವರ
# ಕುರಿಯಾಕೋಸ್ ಏಲಿಯಾಸ್‌ರವರ

# ನೊವೇನ

# ಪುನೀತ ಚಾವರ
# ಕುರಿಯಾಕೋಸ್ ಏಲಿಯಾಸ್‌ರವರ



# ನೊವೇನ

# ಪರಿವಿಡಿ


| | | |
|---|---|---|
| 1. | ಪ್ರಾರಂಭಗೀತೆ | 1 |
| 2. | ಪ್ರಾರಂಭ ಪ್ರಾರ್ಥನೆ | 2 |
| 3. | ಒಂದನೇ ದಿನ | 3 |
| 4. | ಮನವೀ ಮಾಲೆ (ಗದ್ಯ) | 4 |
| 5. | ಮನವೀ ಮಾಲೆ (ಹಾಡು) | 6 |
| 6. | ಸಮಾರೋಪ ಗೀತೆ | 13 |
| 7. | ಎರಡನೇ ದಿನ | 14 |
| 8. | ಮೂರನೇ ದಿನ | 15 |
| 9. | ನಾಲ್ಕನೇ ದಿನ | 16 |
| 10. | ಐದನೇ ದಿನ | 17 |
| 11. | ಆರನೇ ದಿನ | 18 |
| 12. | ಏಳನೇ ದಿನ | 19 |
| 13. | ಎಂಟನೇ ದಿನ | 20 |
| 14. | ಒಂಭತ್ತನೇ ದಿನ | 21 |
| 15. | ಪುನೀತ ಚಾವರ ಕುರಿಯಾಕೋಸ್ ಏಲಿಯಾಸ್ ರವರ ಜೀವನ ಚರಿತ್ರೆ ಸಂಗ್ರಹ | 22 |
| 16. | ಪುನೀತ ಚಾವರ ಕಿರಿಯಾಕೋಸ್ ಏಲಿಯಾಸ್ ರವರ ಜೀವನ ವಿವರ | 26 |
| 17. | ಯುಗಪುರುಷ ಪುನೀತ ಚಾವರವರ ವ್ಯಕ್ತಿ ವೈಭವ | 28 |

| | | |
|---|---|---|
| 18. | ಪುನೀತ ಚಾವರವರ ಜೀವನ ದರ್ಶನ | 29 |
| 19. | ದನ್ಯ ಚಾವರರವರನ್ನು ಸಂತರ ಗಣಕ್ಕೆ ಸೇರಿಸಲು ಕೋರಿಕಾ ಪ್ರಾರ್ಥನೆ | 35 |
| 20. | ಮಧ್ಯಸ್ಥಿಕೆ ಪ್ರಾರ್ಥನೆ | 36 |
| 21. | ಸನ್ಯಾಸ ಸನ್ಯಾಸಿನಿಯರಿಗಾಗಿ ಪ್ರಾರ್ಥನೆ | 37 |
| 22. | ವಿದ್ಯಾರ್ಥಿಗಳಿಗಾಗಿ ಪ್ರಾರ್ಥನೆ | 38 |
| 23. | ಧನ್ಯ ಚಾವರ ಕುರಿಯಾಕೋಸ್ ಏಲಿಯಾಸ್ ರವರ ಕಿರು ನೊವೇನ | 40 |

# ಪುನೀತ ಕುರಿಯಾಕೋಸ್ ಏಲಿಯಾಸ್ ಚಾವರ ಅವರ ನೊವೇನ

## ಪ್ರಾರಂಭ ಗೀತೆ

**(ನೊವೇದ ಪ್ರತಿಯೊಂದು ದಿನವೂ ಪ್ರಾರಂಭದಲ್ಲಿ ಈ ಗೀತೆಯನ್ನು ಹಾಡುವುದು.)**

ಕಾರ್ಮೆಲ್ ಚೇತನವೆ
ನಿರ್ಮಲ ದರ್ಪಣವೇ
ಕುರಿಯಾಕೋಸ್ ಧನ್ಯಾತ್ಮರೇ
ನಮಗಾಗಿ ಪ್ರಾರ್ಥಿಸಿರಿ
ಬಾಳಿನ ಹಾದಿಯಲಿ
ಪಾಪವ ನೀಗಿಸಲು
ಆತ್ಮಕೆ ಆನಂದವೂ
ರಕ್ಷಣೆ ಸಾಧಿಸಲು (ಕಾರ್ಮೆಲ್.....)

ರೋಗ ರುಜಿನಗಳು
ಶಾಂತಿಯಿಂದೊಪ್ಪುವಂತೆ
ಸಹನೆಯ ನೀಡಲೆಂದು
ಬೇಡ್ವೆವು ಅನುದಿನವು (ಕಾರ್ಮೆಲ್.....)

# ಪ್ರಾರಂಭ ಪ್ರಾರ್ಥನೆ

## (ನೊವೇನದ ಪ್ರತಿಯೊಂದು ದಿನವೂ ಪ್ರಾರಂಭದಲ್ಲಿ ಯಾಜಕರು ಈ ಪ್ರಾರ್ಥನೆಯನ್ನು ಹೇಳುವುದು.)

ಇಹಪರಗಳ ಒಡೆಯರಾದ ದೇವರೇ ನಾವು ನಿಮ್ಮನ್ನು ಆರಾಧಿಸಿ ವಂದಿಸುತ್ತೇವೆ. ನೀವು ನಮಗೆ ದಯಪಾಲಿಸಿರುವ ಎಲ್ಲಾ ಅನುಗ್ರಹಗಳನ್ನು ನೆನೆದು ನಿಮಗೆ ಸ್ತುತಿ ಸ್ತೋತ್ರಗಳನ್ನು ಸಲ್ಲಿಸುತ್ತೇವೆ. ನಮ್ಮ ಸಕಲ ಪಾಪಗಳಿಗಾಗಿ ಪಶ್ಚಾತ್ತಾಪ ಪಟ್ಟು ಮೊರೆಯಿಡುತ್ತೇವೆ. ಇನ್ನು ಮುಂದೆ ಪಾಪ ಮಾಡುವುದಿಲ್ಲವೆಂದು ದೃಢ ಪ್ರತಿಜ್ಞೆ ಮಾಡುತ್ತೇವೆ. ಸರ್ವಶಕ್ತರಾದ ದೇವರೆ ನಿಮ್ಮನ್ನು ನಾವು ಪೂರ್ಣ ಹೃದಯದಿಂದ ಪ್ರೀತಿಸುತ್ತೇವೆ. ನಿಮ್ಮ ವಿಶ್ವಾಸಭರಿತ ದಾಸರೂ ನಮ್ಮ ಪಿತರೂ ಆದ ಮಂಗಲಾತ್ಮ ಕುರಿಯಾಕೋಸ್ ಏಲಿಯಾಸ್ ಅವರಿಗೆ ನೀಡಿರುವ ಸಕಲ ವಿಶಿಷ್ಟ ವರದಾನಗಳಿಗಾಗಿ ಅವರೊಂದಿಗೆ ಸೇರಿ ನಾವು ನಿಮಗೆ ಸ್ತೋತ್ರ ಸಲ್ಲಿಸುತ್ತೇವೆ. ಅವರ ಜೊತೆಗೂಡಿ ನಾವು ಸಲ್ಲಿಸುವ ಈ ಪ್ರಾರ್ಥನೆಯನ್ನು ಕರುಣೆಯಿಂದ ಆಲಿಸಿ ನಮ್ಮನ್ನು ಹರಿಸಿರಿ. ಪಿತ, ಸುತ, ಮತ್ತು ಪವಿತ್ರಾತ್ಮರಾದ ಸರ್ವೇಶ್ವರಾ, ಆಮೇನ್.

# ನೊವೇನ - ಒಂದನೇ ದಿನ

## ಹೃದಯ ಶುದ್ಧತೆ

**ಯಾಜಕ :** ಸದ್ಗುಣ ಸಂಪನ್ನರಾದ ದೇವರೆ "ನಿರ್ಮಲ ಹೃದಯಿಗಳು ಭಾಗ್ಯವಂತರು ಏಕೆಂದರೆ ಅವರು ದೇವರನ್ನು ಕಾಣುವರು," ಎಂಬ ದಿವ್ಯವಾಕ್ಯಕ್ಕನುಗುಣವಾಗಿ ಧನ್ಯ ಚಾವರವರು ಬಾಲ್ಯದಿಂದ ಎಲ್ಲರಿಗೂ ಆಶ್ಚರ್ಯಕರವಾದ ನಿರ್ಮಲ ಹೃದಯವುಳ್ಳವರಾಗಿ ಬಾಳಿದ ಕಾರಣ, ದೈವೀಕ ಜ್ಞಾನ ಮತ್ತು ಉನ್ನತ ಧ್ಯಾನ ವರಗಳು ಅವರಿಗೆ ಲಭ್ಯವಾಯಿತು. ಸ್ನಾನದೀಕ್ಷೆಯಲ್ಲಿ ಲಭಿಸಿದ ಕೃಪಾವರಗಳನ್ನು ಯಾವತ್ತು ಕೈಬಿಡದೆ ಮರಣ ಹೊಂದುವವರೆಗೂ ಅದನ್ನು ಕಾಪಾಡಿದರು. ಪೂಜ್ಯ ಪಿತರೇ, ಪಾಪಿಗಳಾದ ನಿಮ್ಮ ಮಕ್ಕಳಾದ ನಾವೂ ಹೃದಯ ಶುದ್ಧತೆಯಿಂದ ಬಾಳಿ, ನಮ್ಮ ಹೃದಯಗಳನ್ನು ದೇವರ ಆಲಯವಾಗಿ ಇಟ್ಟುಕೊಳ್ಳಲು ಬೇಕಾದ ವರಪ್ರಸಾದವನ್ನೂ ಅದರೊಂದಿಗೆ ಈ ನೊವೇನದಲ್ಲಿ ನಾವು ಪ್ರತ್ಯೇಕವಾಗಿ ಬೇಡಿಕೊಳ್ಳುವ ವರಗಳನ್ನು ಪೂಜ್ಯ ಕುರಿಯಾಕೋಸ್ ಏಲಿಯಾಸ್‌ರವರ ಮಧ್ಯಸ್ಥಿಕೆಯಿಂದ ನಮಗೆ ದಯಪಾಲಿಸಿ ನಿಮ್ಮ ಈ ದಾಸನನನ್ನು ಅನುಗ್ರಹಿಸಿರಿ. ಪಿತ, ಸುತ ಮತ್ತು ಪವಿತ್ರಾತ್ಮರಾದ ಸರ್ವೇಶ್ವರಾ.

ಸಮೂಹ : ಆಮೇನ್.

1 ಪರ, 1 ನಮೋ, 1 ಪಿತನಿಗೂ

# ಮನವೀ ಮಾಲೆ (ಗದ್ಯ)

| | |
|---|---|
| ಸ್ವಾಮಿ ದಯೆ ತೋರಿ | ಸ್ವಾಮಿ .............. |
| ಕ್ರಿಸ್ತರೇ ದಯೆ ತೋರಿ | ಕ್ರಿಸ್ತರೇ .............. |
| ಸ್ವಾಮಿ ದಯೆ ತೋರಿ | ಸ್ವಾಮಿ .............. |
| ಕ್ರಿಸ್ತರೇ ನಮ್ಮ ಪ್ರಾರ್ಥನೆಯನ್ನು ಆಲಿಸಿರಿ | ಕ್ರಿಸ್ತರೇ.............. |
| ಪರಲೋಕದ ಪಿತ ದೇವರೇ | ನಮಗೆ ದಯೆ ತೋರಿ |
| ಲೋಕ ರಕ್ಷಕರಾದ ಸುತ ದೇವರೆ | " " " |
| ಪವಿತ್ರಾತ್ಮ ದೇವರೇ | " " " |
| ಪರಮ ತ್ರಿತ್ವ ಏಕ ದೇವರೇ | " " " |
| ದೇವಮಾತೆಯಾದ ಪರಿಶುದ್ಧ ಮರಿಯಮ್ಮನವರೇ | ನಮಗಾಗಿ ಪ್ರಾರ್ಥಿಸಿರಿ |
| ಕಾರ್ಮೆಲ್ ಸಭೆಗೆ ಅಲಂಕಾರವಾದ ಮಾತೆಯೇ | " " " |
| ಕಾರ್ಮೆಲ್ ಸಭೆಯ ಸಂರಕ್ಷಕ ಸಂತ ಜೋಸಫರೇ | " " " |
| ಭಾರತದ ಅಪೋಸ್ತಲ ಸಂತ ಥೋಮಸರೇ | " " " |
| ನಮ್ಮ ಪಿತರಾದ ಮಂಗಲಾತ್ಮ ಚಾವರರವರೆ | " " " |
| ಪರಮ ತ್ರಿತ್ವಕ್ಕೆ ಪ್ರೀತಿ ಪಾತ್ರರೆ | " " " |
| ಪವಿತ್ರಾತ್ಮರಿಗೆ ಇಷ್ಟವಾದ ಆಲಯವೆ | " " " |
| ದಿವ್ಯಬಲಿಪೂಜೆಯ ಭಕ್ತನಾದ ಮಹಾತ್ಮರೆ | " " " |
| ದಿವ್ಯ ಕುಟುಂಬದ ಭಕ್ತರಾದ ಮಹಾತ್ಮರೆ | " " " |
| ಕರ್ಮೆಲ ಮಾತೆಯ ಒಲುಮೆಯ ಪುತ್ರರೆ | " " " |
| ವಿಧೇಯತೆಗೆ ಅತ್ಯುತ್ತಮ ಮಾದರಿಯೇ | " " " |

ಸಹನೆಗೆ ಶ್ರೇಷ್ಠ ಮಾದರಿಯೇ ,, ,, ,,
ತ್ಯಾಗದ ಮೂರ್ತಿಯೇ ,, ,, ,,
ಶತ್ರುಸ್ನೇಹವನ್ನು ಬೆಳಸಿದ ಧನ್ಯಾತ್ಮರೆ ,, ,, ,,
ದುಃಖಿತರಿಗೂ, ಪೀಡತರಿಗೂ
ಆಸರೆಯಾದ ಧನ್ಯಾತ್ಮರೆ ,, ,, ,,
ಉತ್ತಮ ಆತ್ಮಪಾಲಕರಾದ ಧನ್ಯಾತ್ಮರೆ ,, ,, ,,
ಧರ್ಮಸಭೆಗೆ ನವಚೇತನ ನೀಡಿದ
ಪುನೀತರೆ ,, ,, ,,
ಕಾರ್ಮೆಲ್ ಸಭೆಯನ್ನು ಪೋಷಿಸಿದ
ದಿವ್ಯಪಿತನೇ ,, ,, ,,
ಧರ್ಮಸಭೆಯ ವಿಶ್ವಾಸ ಸಂರಕ್ಷಕರೆ ,, ,, ,,
ಪವಿತ್ರ ಸಿಂಹಾಸನದ ಪ್ರೀತಿಗೆ ಪಾತ್ರರಾದ
ಪುಣ್ಯಾತ್ಮರೇ ,, ,, ,,
ಭೂಲೋಕದ ಪಾಪಗಳನ್ನು ಪರಿಹರಿಸುವ ದೇವರ ಕುರಿಮರಿಯೇ
ನಮ್ಮ ಪಾಪಗಳನ್ನು ಕ್ಷಮಿಸಿರಿ
ಭೂಲೋಕದ ಪಾಪಗಳನ್ನು ಪರಿಹರಿಸುವ ದೇವರ ಕುರಿಮರಿಯೇ
ನಮ್ಮ ಪ್ರಾರ್ಥನೆಯನ್ನು ಆಲಿಸಿರಿ
ಭೂಲೋಕದ ಪಾಪಗಳನ್ನು ಪರಿಹರಿಸುವ ದೇವರ ಕುರಿಮರಿಯೇ
ನಮಗೆ ದಯೆತೋರಿ

# ಮನವೀ ಮಾಲೆ (ಹಾಡು)

ಸ್ವಾಮಿ ನೀ ದಯೆತೋರಿ
ಕ್ರಿಸ್ತರೇ ದಯೆತೋರಿ
ಸ್ವಾಮಿ ನಮ್ಮ ಪ್ರಾರ್ಥನೆಯನ್ನು
ಆಲಿಸಿ, ನಮ್ಮನು ರಕ್ಷಿಸಿರಿ

ಸ್ವರ್ಗದ ಪಿತನೇ ಓ ಪ್ರಭುದೇವಾ
ದಿವ್ಯಾನುಗ್ರಹ ಕರುಣಿಸಿರಿ
ಮನುಕುಲ ರಕ್ಷಕ ಕರ್ತರೆ ನೀ
ದಿವ್ಯಾನುಗ್ರಹ ಕರುಣಿಸಿರಿ

ಪಾವನ ಆತ್ಮರೇ ಸಕಲೇಶಾ
ದಿವ್ಯಾನುಗ್ರಹ ಕರುಣಿಸಿರಿ
ಪರಿಪಾವನ ಶ್ರೀ ತ್ರಿತ್ವವೇ
ದಿವ್ಯಾನುಗ್ರಹ ಕರುಣಿಸಿರಿ

ಭಾರತ ಸಭೆಗೇ ತಾರೆಯು ನೀ
ಕೇರಳ ಸಭೆಗೇ ವೈಭವ ನೀ
ಕುಟುಂಬ ಜೀವನ ಪಾಲಕನೇ
ಪ್ರಾರ್ಥಿಸಿರೆಂದೂ ನಮಗಾಗಿ

ಕಾರ್ಮೆಲ್ ಸಭೆಯ ಜ್ಯೋತಿಯು ನೀ
ಯಾಜಕ ಜೀವನ ಮಾದರಿಯೂ
ಪುಣ್ಯ ತಪೋಧನ ಚಾವರ ನೀ
ಪ್ರಾರ್ಥಿಸಿರೆಂದೂ ನಮಗಾಗಿ

ದುಡಿಮೆಯ ಹಾದಿಯ ತೋರಿದೆ ನೀ
ದಾರಿದ್ರ್ಯವನೂ ಕೈಕೊಂಡೆ
ವಿಧೇಯತೆಯಿಂದ ಬಾಳಿದೆ ನೀ
ಪ್ರಾರ್ಥಿಸಿರೆಂದೂ ನಮಗಾಗಿ

ವಿಜ್ಞಾನದ ಸಿರಿ ಕಂಡವನೇ
ಜ್ಞಾನದ ಜ್ಯೋತಿಯ ಬೆಳಗಿದೆ ನೀ
ಪುಣ್ಯ ಪುರೋಹಿತ ಶ್ರೇಷ್ಠನು ನೀ
ಪ್ರಾರ್ಥಿಸಿರೆಂದೂ ನಮಗಾಗಿ

ಆಶ್ರಯ ರಹಿತರಿಗಾಸರೆ ನೀ
ಬಡವರ ಸಂಕಟ ನೀಗಿಸಿದೆ
ಸಮತ್ವ ಭಾವವ ತೋರಿದೆ ನೀ
ಪ್ರಾರ್ಥಿಸಿರೆಂದೂ ನಮಗಾಗಿ

ಆಲ್ಜೀಮರ್ಸ್‌ರ ವ್ಯಾಧಿಯನು
ಅದ್ಭುತವಾಗಿ ನೀಗಿಸಿದ
ಧನ್ಯಾತ್ಮನು ನೀ ಪಾವನನೇ
ಪ್ರಾರ್ಥಿಸಿರೆಂದೂ ನಮಗಾಗಿ

ಸನ್ಯಾಸದ ನವಹಾದಿಯನು
ಕನ್ನಿಕೆಯರಿಗೂ ನೀ ತೆರೆದೆ
ಧನ್ಯ ತಪೋಧನ ಪುಣ್ಯಗುರು
ಪ್ರಾರ್ಥಿಸಿರೆಂದೂ ನಮಗಾಗಿ

ದಿವ್ಯ ಕುಟುಂಬದ ಮಾದರಿಯ
ಸಕಲರಿಗಾಗಿ ತೋರಿದೆ ನೀ
ಅರ್ಪಣ ಜೀವನ ಮಾದರಿ ನೀ
ಪ್ರಾರ್ಥಿಸಿರೆಂದೂ ನಮಗಾಗಿ

ಕವಿತೆಗಳಿಂದಲೆ ಶುಭವಾರ್ತೆ
ಜ್ಯೋತಿಯನೂ ನೀ ಬೆಳಗಿಸಿದೆ
ಕರ್ಮಯೋಗಿಯು ಎಂದಿಗೂ ನೀ
ಪ್ರಾರ್ಥಿಸಿರೆಂದೂ ನಮಗಾಗಿ

ದೇವರ ಮಾತೆಯ ಮಡಿಲಲ್ಲಿ
ಆಶ್ರಯವನ್ನು ನೀ ಪಡೆದೆ
ಧರ್ಮಸಭೆಗೆ ನೀ ಪಾಲಕನು
ಪ್ರಾರ್ಥಿಸಿರೆಂದೂ ನಮಗಾಗಿ

ರೋಗರುಜಿನಗಳ ಹಾದಿಯಲಿ
ಪಾಪದ ಸುಳಿಯಲಿ ಬಳಲುತಿಹ
ಭಕ್ತರ ಮೊರೆಯನು ಆಲಿಸು ನೀ
ಪ್ರಾರ್ಥಿಸಿರೆಂದೂ ನಮಗಾಗಿ

ಲೋಕದ ಪಾಪವ ಹೊರುವ ದೇವರ ಕುರಿಮರಿಯೇ ...
ಪಾಪವ ಕ್ಷಮಿಸು ನೀ
ಲೋಕದ ಪಾಪವ ಹೊರುವ ದೇವರ ಕುರಿಮರಿಯೇ ...
ಪ್ರಾರ್ಥನೆ ಆಲಿಸು ನೀ
ಲೋಕದ ಪಾಪವ ಹೊರುವ ದೇವರ ಕುರಿಮರಿಯೇ ...
ನಮ್ಮಲಿ ದಯೆ ತೋರಿ

## ಪ್ರಾರ್ಥಿಸೋಣ

**ಯಾಜಕ :** ಪುನೀತ ಕುರಿಯಾಕೋಸ್ ಏಲಿಯಾಸ್‌ರವರನ್ನು ವಿಶಿಷ್ಟ ಕೃಪಾವರಗಳಿಂದ ಅಲಂಕರಿಸಿದ ಪಿತ ದೇವರೆ, ಅವರ ಮಕ್ಕಳಾದ ನಾವು ಈ ಲೋಕದಲ್ಲಿ ಬಾಳುವಷ್ಟು ಕಾಲ ಅವರಂತೆಯೇ ನಿರ್ಮಲ ಚಿತ್ತದಿಂದ ಬಾಳಿ, ಪರಲೋಕಕ್ಕೆ ಆಗಮಿಸುವಾಗ ಅವರ ಜೊತೆಗೂಡಿ ನಿಮ್ಮನ್ನು ನಿರಂತರ ಸ್ತುತಿಸಲು ಅನುಗ್ರಹಿಸಬೇಕೆಂದು ಬೇಡಿ ಕೊಳ್ಳುತ್ತೇವೆ. ಪಿತ, ಸುತ ಮತ್ತು ಪವಿತ್ರಾತ್ಮರಾದ ಸರ್ವೇಶ್ವರಾ.

ಸಮೂಹ : ಆಮೆನ್.

## ಘೋಷಣಾ ಪ್ರಾರ್ಥನೆ

ಯಾಜಕ : ನಾವೆಲ್ಲರೂ ಸಂತೋಷ ಮತ್ತು ಭರವಸೆಯೊಂದಿಗೆ ಕರ್ತರೇ ನಮ್ಮ ಪ್ರಾರ್ಥನೆಯನ್ನು ಆಲಿಸಿರಿ ಎಂದು ಬೇಡೋಣ.

ಸಮೂಹ : ಕರ್ತರೇ ನಮ್ಮ ಪ್ರಾರ್ಥನೆಯನ್ನು ಆಲಿಸಿರಿ

ಯಾಜಕ : ಬಾಲ್ಯದಿಂದ ಅಸಾಧಾರಣವಾದ ಹೃದಯ ಪರಿಶುದ್ಧತೆ ಯಿಂದ ಜೀವಿಸಿ ಸ್ನಾನದೀಕ್ಷೆಯಲ್ಲಿ ಲಭಿಸಿದ ವರಪ್ರಸಾದ ವನ್ನು ಒಂದು ಗಳಿಗೆ ಕೂಡ ಕೈಬಿಡದೆ ಭಾಗ್ಯ ಮರಣ ವನ್ನು ಹೊಂದಿದ ಧನ್ಯ ಚಾವರರವರಂತೆ ಬಾಳಿನ ಕೊನೆ ಯವರೆಗೆ ವರಪ್ರಸಾದದಲ್ಲಿ ಜೀವಿಸಲು ಅನುಗ್ರಹಿಸ ಬೇಕೆಂದು ಬೇಡುತ್ತೇವೆ.

ಸಮೂಹ : ಕರ್ತರೇ .............

ಯಾಜಕ : ಪ್ರಾರ್ಥನೆ ಹಾಗೂ ಆಧ್ಯಾತ್ಮಿಕ ಜೀವನದ ಹಾದಿಯಲ್ಲಿ ಪರಿಶುದ್ಧತೆಯ ಪರಿಮಳವನ್ನು ಎಲ್ಲೆಡೆ ಬೀರಿದ ಪೂಜ್ಯರನ್ನು ಅನುಕರಿಸಿ ಪರಸ್ಪರ ಪ್ರೀತಿಯಿಂದ ಬಾಳಲು ಅನುಗ್ರಹಿಸಬೇಕೆಂದು ಬೇಡುತ್ತೇವೆ.

ಸಮೂಹ : ಕರ್ತರೇ .............

ಯಾಜಕ : ಪ್ರಭು ಯೇಸು ಕ್ರಿಸ್ತರಲ್ಲಿರುವ ಆಳವಾದ ನಂಬಿಕೆ ಮತ್ತು ಭಕ್ತಿಯಲ್ಲಿ ಮೆರೆದ ಪುನೀತ ಚಾವರ ರವರ ಹಾಗೆ ಭಕ್ತಿ ಮತ್ತು ವಿಶ್ವಾಸದಲ್ಲಿ ಅಭಿವೃದ್ಧಿ ಹೊಂದಲು ಕರುಣಿಸಬೇಕೆಂದು ಬೇಡುತ್ತೇವೆ.

ಸಮೂಹ : ಕರ್ತರೇ .............

ಯಾಜಕ : ಪವಿತ್ರ ಕುಟುಂಬದ ಭಕ್ತಿಯಲ್ಲಿ ಬೆಳೆದು ಅದನ್ನು ಪ್ರಚಾರ ಮಾಡಿದ ಪೂಜ್ಯ ಚಾವರರವರನ್ನು ಅನುಕರಿಸಿ ನಾವೂ ಪವಿತ್ರಕುಟುಂಬದ ಭಕ್ತಿಯಲ್ಲಿ ಬೆಳೆಯಲು ಅನುಗ್ರಹಿಸಬೇಕೆಂದು ಬೇಡುತ್ತೇವೆ.

ಸಮೂಹ : ಕರ್ತರೇ .............

ಯಾಜಕ : ಶತ್ರುಗಳಿಗೆ ಕ್ಷಮೆಯನ್ನು ನೀಡುತ್ತಾ ಪ್ರಭುವಿನ ಪ್ರೀತಿಯ ಮಾರ್ಗದಲ್ಲಿ ನಡೆದ ಪೂಜ್ಯರನ್ನನುಕರಿಸಿ ಪ್ರೀತಿ ಮತ್ತು ಸೇವೆಯ ಮಾದರಿಗಳಾಗಿ ಬದುಕಲು ಅನುಗ್ರಹ ನೀಡಿರೆಂದು ಬೇಡುತ್ತೇವೆ.

ಸಮೂಹ : ಕರ್ತರೇ .............

ಯಾಜಕ : ಪ್ರಭುವಿನ ಶರೀರವಾದ ಧರ್ಮಸಭೆಯ ಏಳಿಗೆ ಗಾಗಿ ಯತ್ನಿಸಿದ ಪೂಜ್ಯರ ಹಾಗೆ ಧರ್ಮಸಭೆಯ ಬೆಳವಣಿಗೆಗೆ ಪ್ರಯತ್ನಿಸಲು ಶಕ್ತಿ ನೀಡಬೇಕೆಂದು ಬೇಡುತ್ತೇವೆ.

ಸಮೂಹ : ಕರ್ತರೇ .............

ಯಾಜಕ : ಮನುಕುಲಕ್ಕಾಗಿ ಜೀವಾರ್ಪಣೆ ಮಾಡಿದ ಯೇಸು ವಿನ ಹಾದಿಯನ್ನು ಹಿಡಿದು, ಧರ್ಮಸಭೆಗೆ ಎದು ರಾದ ದುರ್ಬೋಧನೆಯಿಂದ ಧರ್ಮ ಸಭೆಯನ್ನು ರಕ್ಷಿಸಿದ ಪೂಜ್ಯರ ಹಾಗೆ ನಾವು ನಮ್ಮ ಅನುದಿನದ ಬಾಳಿನಲ್ಲಿ ಧರ್ಮಸಭೆಯ ಪ್ರಾಮಾಣಿಕ ಮಕ್ಕಳಾಗಿ ಬದುಕಲು ಅನುಗ್ರಹಿಸಬೇಕೆಂದು ಬೇಡುತ್ತೇವೆ.

ಸಮೂಹ : ಕರ್ತರೇ .............

ಯಾಜಕ : ಬಾಳಿನ ಉದ್ದಕ್ಕೂ ಪ್ರಭುಕ್ರಿಸ್ತರ ದ್ರಾಕ್ಷಿತೋಟದಲ್ಲಿ ಪ್ರಾಮಾಣಿಕತೆಯಿಂದ ದುಡಿಮೆ ಮಾಡಲು ಮತ್ತು ದೇವರ ಸಾಮ್ರಾಜ್ಯಕ್ಕೆ ಅನೇಕರನ್ನು ಸಜ್ಜುಗೊಳಿಸಲು ಪೂಜ್ಯ ಚಾವರ ರವರಿಗೆ ವರಗಳನ್ನು ನೀಡಿದ ಪ್ರಭುವೇ, ಭಾರತದಲ್ಲಿ ಹಾಗೂ ಲೋಕದಾದ್ಯಂತ ಸುವಾರ್ತೆಯನ್ನು ಸಾರುವ ಕಾರ್ಯದಲ್ಲಿ ನಿರತ ರಾಗಲು ನಮ್ಮನ್ನು ಅನುಗ್ರಹಿಸಬೇಕೆಂದು ಬೇಡುತ್ತೇವೆ.

ಸಮೂಹ : ಕರ್ತರೇ .............

## ಪ್ರಾರ್ಥಿಸೋಣ

"ಇಂದಿನವರೆಗೆ ನೀವು ನನ್ನ ಹೆಸರಿನಲ್ಲಿ ಏನನ್ನೂ ಬೇಡಿಕೊಂಡಿಲ್ಲ, ಸತ್ಯವಾಗಿ ನಾನು ನಿಮಗೆ ಹೇಳುತ್ತೇನೆ, ನೀವು ನನ್ನ ಹೆಸರಲ್ಲಿ ಪಿತರಲ್ಲಿ ಬೇಡಿಕೊಳ್ಳುವುದನ್ನೆಲ್ಲಾ ಅವರು ನಿಮಗೆ ಕೊಡುವರು." (ಯೋಹ 16:23-24) ಎಂದು ಭರವಸೆ ನೀಡಿದ ಯೇಸುವೇ ನಿಮ್ಮ ಮೂಲಕ ಪಿತದೇವರಲ್ಲಿ ನಾವು ಬೇಡಿಕೊಳ್ಳುವ ಪ್ರಾರ್ಥನೆಯ ಫಲಗಳು ನಮಗೆ ಲಭಿಸುವಂತೆ ಮಾಡಿರಿ. ರಕ್ಷಕರಾದ ಯೇಸುವೆ, ಸಂತ ಮರಿಯಮ್ಮನವರೆ ಸಂತ ಜೋಸೆಫರೆ ನಿಮ್ಮ ಭಕ್ತರಾದ ಧನ್ಯ ಚಾವರರವರ ಸದ್ಗುಣಗಳನ್ನು ಸ್ಮರಿಸಿ ಪಾಪಿಗಳು, ಬಲಹೀನರೂ ಆದ ನಮ್ಮನ್ನು ಪವಿತ್ರೀಕರಿಸಿ ಸ್ವರ್ಗಸಾಮ್ರಾಜ್ಯಕ್ಕೆ ಸೇರಲು ಕೃಪೆತೋರಬೇಕೆಂದು ಹಾಗೂ ನಾವು ಈಗ ಬೇಡುವ ಯಾಚನೆಗಳನ್ನು ಪೂಜ್ಯ ಚಾವರರವರ ಮೂಲಕ ನೆರವೇರಿಸಿಕೊಡಬೇಕೆಂದು ಬೇಡಿಕೊಳ್ಳುತ್ತೇವೆ.

ಸಮೂಹ : ಆಮ್ಮೇನ್.

ಯಾಜಕ : ನಮ್ಮ ಪ್ರಭು ಯೇಸು ಕ್ರಿಸ್ತರ ವರಪ್ರಸಾದವೂ, ದೇವರ ಪ್ರೀತಿಯೂ, ಪವಿತ್ರಾತ್ಮರ ಅನ್ಯೋನ್ಯತೆಯೂ ನಿಮ್ಮೆಲ್ಲರೊಂದಿಗೆ ಇರಲಿ, ಇಂದಿಗೂ + ಎಂದಿಗೂ + ಸದಾಕಾಲಕ್ಕೂ.

ಸಮೂಹ : ಆಮೆನ್.

## ಸಮಾರೋಪಗೀತೆ

## (ಪ್ರತಿ ದಿನವೂ ನೊವೇನದ ಅಂತ್ಯದಲ್ಲಿ ಹಾಡುವುದು.)

ಪರಮ ಪಾವನ ಕುರಿಯಾಕೋಸನ್ನು
ಧರೆಗೆ ನೀಡಿದ ದೇವನೆ
ಸ್ತುತಿಯ ಸಲ್ಲಿಸಿ ಸ್ತೋತ್ರ ಹಾಡ್ವೆವು
ಹರಸು ನಮ್ಮನು ಎಂದಿಗೂ

ಪುನೀತಾತ್ಮರ ಆಶ್ರಯ ಬೇಡಿ
ಮುಂದೆ ಬಂದಿಹ ದಾಸರ
ಶಾಂತಿ ಜೀವನ ನಡೆಸಲೆಮ್ಮನು
ನಿತ್ಯ ಕಾಯುತ ರಕ್ಷಿಸು

ನೋವು ತುಂಬಿದ ಮನದ ಭಾರವ
ನಿನ್ನಯ ಪಾದಕೆ ಅರ್ಪಿಪೆ
ನಡೆಸು ನಮ್ಮನು ಸ್ವರ್ಗಮಾರ್ಗದಿ
ಕರುಣೆ ತೋರಿ ನಿರಂತರ.

ಪರಮ.....

# ನೊವೇನ - ಎರಡನೇ ದಿನ

## (ಪ್ರಾರಂಭ ಭಾಗ - ಪುಟ 1 ರಿಂದ)

## ಪ್ರಾರ್ಥನೆ

**ಯಾಜಕ :** ಸಕಲ ಪ್ರೀತಿ ಸ್ವರೂಪಿಯಾದ ದೇವರೇ, ಯಾವಾಗಲೂ ಪ್ರಜ್ವಲಿಸುವ ದೀಪದಂತೆ ನಿರಂತರವಾದ ಪ್ರಾರ್ಥನೆಯ ಮೂಲಕ ಸದಾಕಾಲ ದೇವರ ಪ್ರೀತಿಯ ಬೆಳಕಿನಲ್ಲಿ ಶೋಭಿಸಿದವರು ಹಾಗು ಸುಗಂಧ ನೀಡುವ ಪುಷ್ಪದಂತೆ ಯಾವಾಗಲೂ ಪಾವನ ಸೌರಭ್ಯ ಬೀರಿದವರೂ ಆದ ಪುನೀತ ಚಾವರರವರರನ್ನು ಭಾರತದ ಧರ್ಮಸಭೆಗೆ ಪ್ರಕಾಶ ನೀಡುವುದಕ್ಕಾಗಿ ಪೀಠದ ಮೇಲೆ ಸ್ಥಾಪಿಸಿದ ಜ್ಯೋತಿಯಾಗಿ ಬೆಳಗಲು ನೀವು ದಯೆ ತೋರಿದಿರಿ. ನಿಮ್ಮ ಕೃಪಾ ಕಟಾಕ್ಷದಿಂದ ಬಲಹೀನರಾದ ನಾವು ಈ ಪೂಜ್ಯರನ್ನು ಅನುಕರಿಸಿ, ಅವರ ಆಶ್ರಿತರಾಗಿ, ದೇವರ ಪ್ರೀತಿಯಲ್ಲಿ ಬೆಳೆಯಲು ಅವಶ್ಯಕವಾದ ಜಪಧ್ಯಾನ, ತ್ಯಾಗ ಚೈತನ್ಯವನ್ನೂ ಪ್ರತ್ಯೇಕವಾಗಿ ಈ ನೊವೇನದಲ್ಲಿ ನಾವು ಬೇಡುವ ಅನುಗ್ರಹಗಳನ್ನೂ .......... ಪುನೀತರಾದ ಚಾವರವರ ಮುಖಾಂತರ ನಮಗೆ ದಯಪಾಲಿಸಿರಿ. ಪಿತ, ಸುತ ಮತ್ತು ಪವಿತ್ರಾತ್ಮರಾದ ಸರ್ವೇಶ್ವರಾ.

ಸಮೂಹ : ಆಮೆನ್.

1 ಪರ, 1 ನಮೋ, 1 ಪಿತನಿಗು

# ನೊವೇನ - ಮೂರನೇ ದಿನ

## ಪರಮ ಪ್ರಸಾದ ಭಕ್ತಿ

**ಯಾಜಕ :** ಪ್ರೀತಿಮಯನಾದ ದೇವರೇ, ಪ್ರೀತಿಯ ಸಂಸ್ಕಾರವಾದ ಪರಮ ಪ್ರಸಾದದಲ್ಲಿರುವ ಕ್ರಿಸ್ತನ ಸಜೀವ ಸಾನ್ನಿಧ್ಯದಲ್ಲಿ ಪುನೀತ ಕುರಿಯಾಕೋಸ್ ಏಲಿಯಾಸ್‌ರವರಿಗೆ ಇದ್ದ ನಂಬಿಕೆ ಭಕ್ತಿಯಿಂದ ಕೂಡಿದ ಬಲಿಪೂಜಾರ್ಪಣೆ ಹಾಗೂ ಪರಮ ಪ್ರಸಾದ ಆರಾಧನೆಯಿಂದ ನಿಮ್ಮನ್ನು ಸ್ತುತಿಸಲು, ಅನೇಕ ಆತ್ಮಗಳನ್ನು ಭಕ್ತಿಯ ಮಾರ್ಗಕ್ಕೂ, ಪೂಜ್ಯ ಬಾಳಿಗೂ ನೀವು ಆಹ್ವಾನ ಮಾಡಿದ್ದೀರಿ. ಪರಮ ಪ್ರಸಾದದ ಸಮ್ಮುಖದಲ್ಲಿ ಯಾವಾಗಲೂ ಪ್ರಾರ್ಥನಾ ಮಗ್ನರಾಗಿ ನಿಲ್ಲಲು ಅವರನ್ನು ಕರುಣಿಸಿದ್ದೀರಿ. ಬಲಹೀನರೂ ಪಾಪಿಗಳು ಆಗಿದ್ದರೂ ಪೂಜ್ಯರ ಆಶ್ರಿತರಾದ ನಾವು ಪರಮ ಪ್ರಸಾದವನ್ನು ಸ್ವೀಕರಿಸಲು ಮತ್ತು ದಿವ್ಯ ಔತಣದ ಮಾಧುರ್ಯದಲ್ಲಿ ಸದಾಕಾಲ ಕ್ರಿಸ್ತರ ಐಕ್ಯತೆಯಲ್ಲಿ ಪುಣ್ಯದ ಹಾದಿಯಲ್ಲಿ ನಡೆಯಲು ಬೇಕಾದ ಸಕಲ ಕೃಪಾವರಗಳನ್ನು ಮತ್ತು ಈ ನೊವೇನದಲ್ಲಿ ನಾವು ಬೇಡಿಕೊಳ್ಳುವ ಪ್ರತ್ಯೇಕ ಅನುಗ್ರಹಗಳನ್ನು .......... ಧನ್ಯ ಚಾವರರವರ ಮುಖಾಂತರ ನಮಗೆ ದಯಪಾಲಿಸಿರಿ. ಪಿತ, ಸುತ ಮತ್ತು ಪವಿತ್ರಾತ್ಮರಾದ ಸರ್ವೇಶ್ವರಾ.

ಸಮೂಹ : ಆಮೆನ್.

1 ಪರ, 1 ನಮೋ, 1 ಪಿತನಿಗೂ

# ನೊವೇನ - ನಾಲ್ಕನೇ ದಿನ

## ಪವಿತ್ರ ಕುಟುಂಬದ ಮೇಲಿರುವ ಭಕ್ತಿ

**ಯಾಜಕ :** ಕರುಣಾಮಯನಾದ ತಂದೆಯೆ, ಬಾಲ್ಯದಿಂದಲೂ ಪವಿತ್ರಕುಟುಂಬದ ಮೇಲೆ ಭಕ್ತಿಯನ್ನು ಹೊಂದಿ, ಅದನ್ನು ಪ್ರಚಾರಮಾಡಿ, ಆ ಭಕ್ತಿಯ ಮುಖಾಂತರ ಅನೇಕ ವಿಶಿಷ್ಟ ದಾನಗಳನ್ನು ಪಡೆದು ನಿರ್ಮಲ ಸ್ಥಿತಿಯಲ್ಲಿರುವಾಗಲೇ ಭಾಗ್ಯ ಮರಣ ಹೊಂದಿದ ದಾಸರಲ್ಲವೇ ಧನ್ಯ ಚಾವರರವರು. ಅವರ ದಿವ್ಯ ಜೀವನವನ್ನು ಮನಗಂಡಿರುವ ನಾವು ಆ ದಿವ್ಯ ಗುರುವನ್ನು ಹಿಂಬಾಲಿಸಿ, ಪವಿತ್ರ ಕುಟುಂಬದ ಮೇಲಿನ ಭಕ್ತಿಯಲ್ಲಿ ಬೆಳೆದು, ನಿರ್ಮಲ ಬದುಕನ್ನು ನಡೆಸಿ, ಕೊನೆಗೆ ಮರಿಯ, ಜೋಸೆಫ್ ಮತ್ತು ಯೇಸುವಿನ ಕರಗಳಲ್ಲಿ ನಮ್ಮ ಆತ್ಮಗಳನ್ನು ಅರ್ಪಿಸಿ ಭಾಗ್ಯಮರಣ ಹೊಂದಲು ಬೇಕಾದ ಎಲ್ಲಾ ವರಗಳನ್ನು ಹಾಗೂ ಈ ನೊವೇನದಲ್ಲಿ ನಾವು ಯಾಚಿಸುವ ಪ್ರತ್ಯೇಕ ವರಗಳನ್ನು ...... ಧನ್ಯ ಚಾವರರವರ ಮುಖಾಂತರ ದಯ ಪಾಲಿಸಬೇಕೆಂದು ಬೇಡುತ್ತೇವೆ. ಪಿತ, ಸುತ ಮತ್ತು ಪವಿತ್ರಾತ್ಮರಾದ ಸರ್ವೇಶ್ವರಾ.

ಸಮೂಹ : ಆಮೆನ್.

1 ಪರ, 1 ನಮೋ, 1 ಪಿತನಿಗೂ

## ನೊವೇನ - ಐದನೇ ದಿನ

## ಶತ್ರು ಸ್ನೇಹ

**ಯಾಜಕ :** "ನಿಮ್ಮ ಶತ್ರುಗಳನ್ನು ಪ್ರೀತಿಸಿ ನಿಮಗೆ ಕೇಡು ಮಾಡುವವರಿಗೆ ಒಳಿತನ್ನು ಮಾಡಿರಿ" ಎಂದು ಹೇಳಿದ ಪ್ರಭುವೆ ನಮ್ಮ ಶತ್ರುಗಳನ್ನು ಪ್ರೀತಿಸಿ ಅವರಿಗೆ ಒಳಿತನ್ನು ಮಾಡುವ ಶಕ್ತಿಯನ್ನು ನೀಡಿರಿ. ಪ್ರಭುವಿನ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಪರರಿಗೆ ಪ್ರೀತಿ ಮತ್ತು ಅನುಕಂಪ ತೋರಿ ಅವರಿಗೆ ಸೇವೆಯನ್ನು ಮಾಡಲು ಆಹ್ವಾನಿಸಿದ ತೇಜೋಮಯ ಚಾವರರವರಲ್ಲಿ ಇದ್ದ ಹಾಗೆ ನಮ್ಮಲ್ಲಿ ಪ್ರೀತಿಯೆಂಬ ಈ ಮಹಾಗುಣವು ಬೆಳೆಯುವಂತೆ ಕರುಣಿಸಿರಿ. ಪ್ರಭು ಯೇಸು ಸ್ವಾಮಿಯ ಆದರ್ಶಗಳಿಗನುಸಾರವಾಗಿ ಬಾಳಲು ಬೇಕಾದ ಎಲ್ಲಾ ವರಗಳನ್ನೂ ಪ್ರತ್ಯೇಕವಾಗಿ ಈ ನೊವೇನದಲ್ಲಿ ನಾವು ಬೇಡುವ ವರಗಳನ್ನೂ ........... ಪೂಜ್ಯ ಚಾವರ ರವರ ಮದ್ಯಸ್ಥಿಕೆಯಲ್ಲಿ ನಮಗೆ ದಯಪಾಲಿಸಿ ನಿಮ್ಮ ಈ ದಾಸನನ್ನು ಪಾವನಗೊಳಿಸಿರೆಂದು ಬೇಡುತ್ತೇವೆ. ಪಿತ, ಸುತ ಮತ್ತು ಪವಿತ್ರಾತ್ಮರಾದ ಸರ್ವೇಶ್ವರಾ.

ಸಮೂಹ : ಆಮೆನ್.

1 ಪರ, 1 ನಮೋ, 1 ಪಿತನಿಗೂ

## ನೊವೇನ - ಆರನೇ ದಿನ

## ಧರ್ಮಸಭೆಯ ಮೇಲಿನ ಪ್ರೀತಿ

**ಯಾಜಕ :** ಕರುಣಾಳು ದೇವರೆ ಧನ್ಯ ಚಾವರರವರಿಗೆ ಧರ್ಮಸಭೆಯ ಸುಧಾರಣೆಗಾಗಿ ದುಡಿಯುವ ಶಕ್ತಿಯನ್ನು ನೀವು ಕರುಣಿಸಿದಿರಿ. ಇದರ ಫಲವಾಗಿ ಅವರು ರೋಕೋಸರ ದೋಷಬೋಧನೆಯಿಂದ ಧರ್ಮಸಭೆಯನ್ನು ರಕ್ಷಿಸಿದರು. ಕ್ರಮಬದ್ಧ ಆರಾಧನಾ ವಿಧಿಗಳಿಲ್ಲದ ದೇವಾಲಯವನ್ನು ಗುರುತಿಸಿ ಅಲ್ಲಿ ಕ್ರಮಬದ್ಧತೆಯನ್ನು ತಂದುಕೊಟ್ಟರು. ಎಲ್ಲೆಡೆಯಲ್ಲೂ ಏಕರೂಪದ ಪ್ರಾರ್ಥನಾ ವಿಧಿಗಳನ್ನು ಜಾರಿಗೊಳಿಸಿದರು. ಪುರುಷರಿಗೆ ಮತ್ತು ಸ್ತ್ರೀಯರಿಗೆ ಪ್ರತ್ಯೇಕವಾಗಿ ಸನ್ಯಾಸಸಭೆಗಳನ್ನು ಸ್ಥಾಪಿಸಿ ಧರ್ಮಸಭೆಯ ಪುನರುಜ್ಜೀವನಕ್ಕಾಗಿ ಯತ್ನಿಸಿದರು. ಪರಮ ಪಿತನೆ ನಾವೂ ಕೂಡ ಧನ್ಯ ಚಾವರರವರಂತೆ ಧರ್ಮಸಭೆಯ ಪ್ರಾಮಾಣಿಕ ಮಕ್ಕಳಾಗಿ ಬಾಳಿ, ಧರ್ಮಸಭೆಯ ಉದ್ಧಾರಕ್ಕಾಗಿ ಯತ್ನಿಸಲು ಬೇಕಾದ ಶಕ್ತಿಯನ್ನು ಕರುಣಿಸಿರಿ.

ಸಮೂಹ : ಆಮೆನ್.

1 ಪರ, 1 ನಮೋ, 1 ಪಿತನಿಗೂ

## ನೊವೇನ - ಏಳನೇ ದಿನ

## ಆತ್ಮಗಳ ರಕ್ಷಣೆ

**ಯಾಜಕ** : ಆತ್ಮಗಳ ರಕ್ಷಣೆಯನ್ನು ಅಧಿಕವಾಗಿ ಇಚ್ಛಿಸುವ ಪ್ರೀತಿಮಯರಾದ ದೇವರೇ, "ನನಗೆ ದಾಹವಾಗುತ್ತಿದೆ" ಎಂಬ ಯೇಸುವಿನ ಮಾತಿನಲ್ಲಿ ಆತ್ಮಗಳ ರಕ್ಷಣೆಯ ಬಗ್ಗೆ ಇರುವ ದಾಹವನ್ನು ತೋರ್ಪಡಿಸಿದಿರಿ. ಪ್ರಭು ಕ್ರಿಸ್ತರ ಈ ವಾಕ್ಯಕ್ಕನುಸಾರವಾಗಿ ತನ್ನ ಜೀವನವನ್ನು ದೇವರಿಗೆ ಮುಡಿಪಾಗಿಟ್ಟು, ಅನೇಕರನ್ನು ನಿಮ್ಮೆಡೆಗೆ ಕೈ ಹಿಡಿದು ನಡೆಸಿದರು. ಧರ್ಮಸಭೆಗೆ ಎದುರಾಗಿ ಬೀಸಿದ ರೋಕೋಸ್‌ರವರ ದೋಷಬೋದನೆಯ ವಿಷ ಗಾಳಿಯಿಂದ ಧರ್ಮಸಭೆಯನ್ನು ರಕ್ಷಿಸಿದ ಧನ್ಯ ಚಾವರರವರು ದೇವರ ಪ್ರೀತಿಗೆ ಪಾತ್ರರಾದರು. ಆದರೂ ಯಾವ ಪ್ರಶಂಸೆಗೂ ಹಿಗ್ಗದೆ ಬದುಕಿದ ನಿಮ್ಮ ದಾಸರಾದ ಧನ್ಯ ಕುರಿಯಾಕೋಸ್ ಏಲಿಯಾಸ್‌ರವರ ಪರಿಶುದ್ಧ ಬಾಳನ್ನು ಸ್ಮರಿಸುತ್ತಾ ನಾವು ದೇವರ ಪ್ರೀತಿಯಲ್ಲಿ ಬೆಳೆದು ಎಲ್ಲರ ಆತ್ಮ ರಕ್ಷಣೆಗಾಗಿ ಸದಾ ದುಡಿಯಲು ಬೇಕಾದ ಎಲ್ಲಾ ವರಗಳನ್ನು ಅದರೊಂದಿಗೆ ಈ ನೊವೇನದಲ್ಲಿ ನಾವು ಪ್ರತ್ಯೇಕವಾಗಿ ಬೇಡುವ ಅನುಗ್ರಹ ಗಳನ್ನೂ .......... ನಮಗೆ ದಯಪಾಲಿಸಬೇಕೆಂದು, ನಿಮ್ಮ ಪ್ರಾಮಾಣಿಕ ದಾಸರಾದ ಧನ್ಯ ಚಾವರ ಅವರ ಮುಖಾಂತರ ಬೇಡುತ್ತೇವೆ. ಪಿತ, ಸುತ ಮತ್ತು ಪವಿತ್ರಾತ್ಮರಾದ ಸರ್ವೇಶ್ವರಾ.

ಸಮೂಹ : ಆಮೆನ್.

1 ಪರ, 1 ನಮೋ, 1 ಪಿತನಿಗೂ

## ನೊವೇನ - ಎಂಟನೇ ದಿನ

## ವಿಧೇಯತೆ ಎಂಬ ಪುಣ್ಯ

**ಯಾಜಕ :** ಪರಿಶುದ್ಧರೂ ಅತಿಶಯವಾದ ಮಹಿಮೆಗೆ ಅರ್ಹರೂ ಆದ ಸರ್ವೇಶ್ವರ ಶಿಲುಬೆಯ ಮರಣದವರೆಗೆ ಪಿತನಾದ ದೇವರಿಗೆ ವಿಧೇಯತೆ ತೋರಿದ ಯೇಸು ಸ್ವಾಮಿಯನ್ನು ಹಿಂಬಾಲಿಸಿದ ದಾಸ ಶ್ರೇಷ್ಠರಾಗಿರಲಿಲ್ಲವೆ ಧನ್ಯ ಚಾವರರವರು. "ವಿಧೇಯತೆಯು ಯಾವುದೇ ಬಲಿಗಳಿಗಿಂತ ಶ್ರೇಷ್ಠ" ಎಂಬ ಯೇಸು ಸ್ವಾಮಿಯ ಭೋಧನೆಯಂತೆ ವಿಧೇಯತೆಯಿಂದ ಬದುಕಿ, ದೇವರ ಆಜ್ಞೆಯನ್ನು ಪಾಲಿಸಿ ಶಿಲುಬೆಯ ಮರಣಕ್ಕೂ ವಿಧೇಯರಾದ ಯೇಸುಸ್ವಾಮಿಯನ್ನು ಹಿಂಬಾಲಿಸಿ, ಜೀವನಪರ್ಯಂತ ಒಬ್ಬ ಉತ್ತಮ ಸನ್ಯಾಸಿಯಾಗಿ ಬದುಕಿ ಬಾಳಿದ ನಿಮ್ಮ ದಾಸರಾಗಿದ್ದರು ಧನ್ಯ ಕುರಿಯಕೋಸ್ ಚಾವರ ಅವರು. ಧನ್ಯ ಚಾವರರವರ ಪುಣ್ಯಜೀವನವನ್ನು ಸ್ಮರಿಸುತ್ತಾ ಕ್ರೈಸ್ತ ಬದುಕನ್ನು ನಡೆಸುವ ನಾವು ದೇವರಲ್ಲಿ ಇರುವ ನಂಬಿಕೆಯಲ್ಲಿ ಇಳಿಮುಖವಾಗದೆ ಯೇಸುವನ್ನು ಹಿಂಬಾಲಿಸುವುದರಲ್ಲಿ ಉದಾಸೀನತೆ ತೋರದೆ ಭರವಸೆಯಿಂದ ದೇವರ ಆಜ್ಞೆಯನ್ನು ಪರಿಪಾಲಿಸುತ್ತಾ ಪರಿಶುದ್ಧವಾದ ಬದುಕನ್ನು ನಡೆಸಲು ಬೇಕಾದ ವರಗಳನ್ನು ಕರುಣಿಸಿರಿ ಹಾಗೂ ಈ ನೊವೇನದಲ್ಲಿ ಬೇಡುವ ಅನುಗ್ರಹಗಳನ್ನೂ ......... ಧನ್ಯ ಚಾವರ ಅವರ ಮುಖಾಂತರ ನಮಗೆ ದಯಪಾಲಿಸಬೇಕೆಂದು ಬೇಡುತ್ತೇವೆ. ಪಿತ, ಸುತ ಮತ್ತು ಪವಿತ್ರಾತ್ಮರಾದ ಸರ್ವೇಶ್ವರಾ.

ಸಮೂಹ : ಆಮೆನ್.

1 ಪರ, 1 ನಮೋ, 1 ಪಿತನಿಗೂ

## ನೊವೇನ - ಒಂಬತ್ತನೇ ದಿನ

### ಪ್ರೇಷಿತ ಚೈತನ್ಯ

**ಯಾಜಕ :** "ಬೆಳೆಯು ಹೇರಳ, ಕೊಯಿಲುಗಾರರು ವಿರಳ; ಈ ಕಾರಣ ತನ್ನ ಕೊಯಿಲಿಗೆ ಆಳುಗಳನ್ನು ಕಳುಹಿಸುವಂತೆ ಬೆಳೆಯ ಯಜಮಾನನನ್ನು ಪ್ರಾರ್ಥಿಸಿರಿ" ಎಂದು ಸಾರಿದ ಪ್ರಭುವಿನ ಸುವಾರ್ತೆಯನ್ನು ಸ್ವೀಕರಿಸಿ, ಧರ್ಮಸಭೆಯ ಧೀರ ಯೋಧರಾಗಿ, ದೇವರ ದ್ರಾಕ್ಷಿ ತೋಟದ ಕೆಲಸಗಾರರೂ ಬೆಳೆಯ ಕೊಯಿಲುಗಾರರೂ ಆಗಿ ಅನೇಕ ಪ್ರೇಷಿತರನ್ನು ಪಡೆಯಲು ಧನ್ಯ ಚಾವರರವರಿಗೆ ಶಕ್ತಿ ನೀಡಿದಿರಿ. ತಾವು ಸ್ಥಾಪಿಸಿದ ಸನ್ಯಾಸ ಸಭೆಗಳ ಮೂಲಕ ನಿಮ್ಮ ಸೇವೆ ಮಾಡಲು ಅನೇಕ ನಿಷ್ಠಾವಂತ ಯುವ ಹಿಂಬಾಲಕರು ಮುಂದೆ ಬರುವಂತೆ ಮಾಡಿದಿರಿ. ನಿಮ್ಮ ನಲ್ಮೆಯ ಮಕ್ಕಳಾದ ನಾವು ಧನ್ಯ ಚಾವರರವರ ಮಾರ್ಗದರ್ಶನ ಸ್ವೀಕರಿಸುತ್ತಾ ನಿಜವಾದ ಪ್ರೇಷಿತ ಸ್ಫೂರ್ತಿಯುಳ್ಳವರಾಗಿ, ಧರ್ಮಸಭೆಯ ಸೇವೆಮಾಡಲು ಹೆಚ್ಚು ಹೆಚ್ಚು ಸೇವಕ ಸಹೋದರರನ್ನು ಕರೆತರುವ ಕೆಲಸದಲ್ಲಿ ನಿರತರಾಗಲು ಶಕ್ತಿ ನೀಡಬೇಕೆಂದು ಹಾಗೂ ಈ ನೊವೇನದಲ್ಲಿ ನಾವು ಪ್ರತ್ಯೇಕವಾಗಿ ಬೇಡುವ ವರಗಳನ್ನೂ ............... ಧನ್ಯ ಚಾವರರವರ ಮುಖಾಂತರ ದಯಪಾಲಿಸಬೇಕೆಂದು ಬೇಡುತ್ತೇವೆ. ಪಿತ, ಸುತ ಮತ್ತು ಪವಿತ್ರಾತ್ಮರಾದ ಸರ್ವೇಶ್ವರ.

ಸಮೂಹ : ಆಮೆನ್.

1 ಪರ, 1 ನಮೋ, 1 ಪಿತನಿಗೂ

## ಪುನೀತ ಚಾವರ ಕುರಿಯಕೋಸ್ ಏಲಿಯಾಸ್ ರವರ ಜೀವನ ಚರಿತೆ ಸಂಗ್ರಹ

ಪುನೀತ ಕುರಿಯಕೋಸ್ ಏಲಿಯಾಸ್ ಚಾವರರವರು, ಕೇರಳದ ಕೈನಕರಿ ಎಂಬ ಸ್ಥಳದಲ್ಲಿ ಚಾವರ ಕುಟುಂಬದಲ್ಲಿ 1805ನೇ ಇಸವಿ, ಫೆಬ್ರವರಿ 10ನೇ ತಾರೀಖು ಜನ್ಮ ತಾಳಿದರು. 1815ರಲ್ಲಿ ಶಾಲಾ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿಕೊಂಡು, ಪಂಡಿತರಾಗಿದ್ದ ಪಾಲಕ್ಕಲ್ ತೋಮಾ ಗುರುಗಳ ಮಾರ್ಗದರ್ಶನದಲ್ಲಿ ಪಳ್ಳಿಪುರಮ್ ಗುರುವಿದ್ಯಾ ಮಠದಲ್ಲಿ ವ್ಯಾಸಂಗ ಮಾಡಲು ಆರಂಭಿಸಿದರು. 1829ರಲ್ಲಿ ತಮ್ಮ 24ನೇ ವಯಸ್ಸಿನಲ್ಲಿ ಇವರು ಯಾಜಕಾಭಿಷೇಕ ಸ್ವೀಕರಿಸಿದರು.

ಯಾಜಕ ದೀಕ್ಷೆಯನ್ನು ಪಡೆದನಂತರ ಇವರಿಗೆ ಸನ್ಯಾಸ ದೀಕ್ಷೆ ಪಡೆಯಬೇಕೆಂಬ ಆಸೆ ಮೊಳೆಯಿತು. ಇವರ ಈ ಆಸೆ ಕೇವಲ ಎರಡು ವರ್ಷಗಳಲ್ಲಿ ಈಡೇರಿತು. 1831ರಲ್ಲಿ ತಾವೇ ಒಂದು ಸನ್ಯಾಸ ಸಭೆಯನ್ನು ಪ್ರಾರಂಭಿಸಿದರು. ಇಬ್ಬರು ಸುಪ್ರಸಿದ್ಧರಾದ ಪಂಡಿತ ಗುರುಗಳ ಸಹಕಾರಗಳೊಂದಿಗೆ (ಪಂಡಿತರಾದ ಪಾಲಕ್ಕಲ್ ತೋಮಾ ಗುರುಗಳು ಮತ್ತು ಪಂಡಿತರಾದ ಪೊರೂಕ್ಕರ ತೋಮಾ ಗುರುಗಳು) ಮಾನ್ನಾನದ ಗುಡ್ಡದಲ್ಲಿ 1846ರಲ್ಲಿ ಸ್ಥಾಪಿಸಿದ ಈ ಸನ್ಯಾಸ ಸಭೆಗೆ ಕಾರ್ಮೆಲ್ ಮಾತೆಯ ನಿಷ್ಪಾತುಗ 3ನೇ ಸಭೆ ಎಂಬ ಹೆಸರನ್ನು ನೀಡಲಾಯಿತು. 1953ರಲ್ಲಿ ಈ ಸನ್ಯಾಸ ಸಭೆ ಕಾರ್ಮೆಲೈಟ್ಸ್ ಆಫ್ ಮೇರಿ ಇಮ್ಯಾಕ್ಯುಲೇಟ್ (ಸಿ.ಎಂ.ಐ.) ಎಂಬ ಹೊಸ ಹೆಸರನ್ನು ಪಡೆಯಿತು.

1861ರಿಂದ ಚಾವರರವರು ಭಾರತದ ಸಿರಿಯನ್ ಕಥೋಲಿಕ ಧರ್ಮಸಭೆಯ ವಿಕಾರ್ ಜನರಲ್ ಆಗಿ ಅಮೋಘ ಸೇವೆಯನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಧರ್ಮ ಸಭೆ ಎದುರಿಸಬೇಕಾಗಿ

ಬಂದ ರೋಕೋಸ್‌ರವರ ದೋಷಬೋದನೆಯ ವಿರುದ್ಧ ಹೋರಾಡಿದರು. ಈ ಮಹಾ ಹಾನಿಯಿಂದ ಧರ್ಮಸಭೆ ಯನ್ನು ಕಾಪಾಡಿದ ಚಾವರರವರನ್ನು ಅಂದಿನ ಕಥೋಲಿಕ ಧರ್ಮ ಸಭೆಯ ಜಗದ್ಗುರು ಆಗಿದ್ದ ಒಂಬತ್ತನೇ ಪಯಸ್‌ರವರು ಮೆಚ್ಚಿದರು. 1832ರಿಂದ ಸುಮಾರು 32 ವರ್ಷಗಳ ಕಾಲ, ಮಾನ್ನಾನಮ್ ಎಂಬ ಸ್ಥಳವನ್ನು ಕೇಂದ್ರವಾಗಿಟ್ಟುಕೊಂಡು ಜನರ ಆಧ್ಯಾತ್ಮಿಕ ಜೀವನದ ಸುಧಾರಣೆ, ಯಾಜಕರಿಗೆ ತರಬೇತಿ, ವಿವಿಧ ಆರಾಧನಾ ವಿಧಿಗಳ ಪರಿಷ್ಕರಣೆ, ಶಾಲೆಗಳ ಸ್ಥಾಪನೆ ಮುಂತಾದ ಸಾಮಾಜಿಕ ಸೇವೆಯಲ್ಲಿ ತೊಡಗಿ ಒಬ್ಬ ಮಹಾ ಚೇತನವಾಗಿ ರಾರಾಜಿಸಿದರು. ಒಬ್ಬ ಪ್ರಸಿದ್ಧ ಬರಹಗಾರರಾಗಿಯೂ ಇವರು ಧರ್ಮಸಭೆಗೆ ಅಪಾರ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಸಮಯದಲ್ಲಿ ಇವರು ತಾನು ಸ್ಥಾಪಿಸಿದ ಸನ್ಯಾಸ ಸಭೆಗಳಿಗೆ ಮಾತ್ರವಲ್ಲದೆ ಜಾತಿ, ಧರ್ಮ, ಬೇಧವಿಲ್ಲದೆ ಸಕಲರಿಗೂ ಹಲವಾರು ರೀತಿಯಲ್ಲಿ ಸೇವೆ ಸಲ್ಲಿಸಿದ್ದಾರೆ.

1855 ಡಿಸೆಂಬರ್ 8 ರಂದು ಅಮಲೋದ್ಭವ ಮಾತೆಯ ಹಬ್ಬದ ದಿನ ಧನ್ಯ ಚಾವರ ರವರು ಪ್ರಥಮವಾಗಿ ತಮ್ಮ ಸನ್ಯಾಸ ವ್ರತಗಳನ್ನು ದೇವರಿಗೆ ಅರ್ಪಿಸಿದರು. ಅವರೇ ಈ ಸನ್ಯಾಸ ಸಭೆಯ ಮೊಟ್ಟಮೊದಲ ಪರಮಾಧಿಕಾರಿ ಅಥವಾ ಪ್ರಯರ್ ಜನರಲ್ ಆದರು. ಕಾನೋನಿಕವಾಗಿ ಸಭೆಯು ಸ್ಥಾಪನೆಗೊಂಡ ದಿನ ಆದಾಯಿತು. ಅಂದು ಸಭೆಯ ಸದಸ್ಯರಾಗಲು ಹತ್ತು ಯಾಜಕರು ಧನ್ಯ ಚಾವರರವರ ಸಮಕ್ಷಮದಲ್ಲಿ ಪ್ರಥಮವಾಗಿ ತಮ್ಮ ಸನ್ಯಾಸ ವ್ರತ ಸಮರ್ಪಣೆಯನ್ನು ಮಾಡಿಕೊಂಡು ಸನ್ಯಾಸ ಸಭೆಯಲ್ಲಿ ಸದಸ್ಯರಾದರು.

1864ರಿಂದ ಮುಂದಿನ ಏಳು ವರ್ಷಗಳ ಕಾಲ ತಾನು ಮರಣ ಹೊಂದುವವರೆಗೆ ಅವರ ಸೇವಾ ಕೇಂದ್ರವು ಕೂನಮ್ಮಾವು ಎಂಬ ಸ್ಥಳವಾಗಿತ್ತು. ಈ ಸಂದರ್ಭದಲ್ಲಿ ಚಾವರರವರು ಸ್ತ್ರೀಯರಿಗಾಗಿ ಒಂದು ಸನ್ಯಾಸಿನಿ ಸಭೆಯನ್ನು ಪ್ರಾರಂಭಿಸಿದರು. 1866ರಲ್ಲಿ ಚಾವರರವರಿಂದ ಪ್ರಾರಂಭವಾದ ಈ ಸನ್ಯಾಸಿನಿ ಸಭೆಗೆ ಚಾರವರವರು "ಕಾಂಗ್ರಿಗೇಷನ್ ಆಫ್ ಮದರ್ ಕಾರ್ಮೆಲ್" (ಸಿ.ಎಂ.ಸಿ) ಎಂಬ ಹೆಸರನ್ನು ನೀಡಿದರು. ಈ ಸಭೆಯ ಮೊದಲ ಸನ್ಯಾಸಿನಿ ಗೃಹ ಕೂನಮ್ಮಾವಿನಲ್ಲಿ ಸ್ಥಾಪನೆಯಾಯಿತು. ಇದು ಸಿರೋಮಲಬಾರ್ ಧರ್ಮಸಭೆಯ ಮೊಟ್ಟಮೊದಲ ಸನ್ಯಾಸಿನಿ ಸಭೆ ಎನಿಸಿದೆ. ನಿಜಕ್ಕೂ ಒಬ್ಬ ದೈವೀಕ ಮನುಷ್ಯರಾಗಿದ್ದ ಧನ್ಯ ಚಾವರ ರವರು 1871 ಜನವರಿ 3ರಂದು ಕೂನಮ್ಮಾವು ಎಂಬ ಸ್ಥಳದಲ್ಲಿ ಇರುವಾಗ ತಮ್ಮ ಕೊನೆಯ ಉಸಿರೆಳೆದು ಪರಲೋಕ ಸೇರಿದರು. ಪೂಜ್ಯರ ಪಾರ್ಥಿವ ಶರೀರವನ್ನು ಕೂನಮ್ಮಾವಿನಲ್ಲಿ ಭೂದಾನ ಮಾಡಿದ ಕ್ಷಣದಿಂದ ಆ ಪ್ರದೇಶವು ಒಂದು ಪುಣ್ಯ ಭೂಮಿ ಯಾಯಿತು.

18 ವರ್ಷಗಳ ನಂತರ 1889 ಮೇ ತಿಂಗಳ 24ರಂದು ಈ ಪಾವನಾತ್ಮರ ಪೂಜ್ಯಾವಶಿಷ್ಟಗಳನ್ನು ಕೂನಮ್ಮಾವು ಸಂತ ಫಿಲೋಮಿನಾ ರವರ ದೇವಾಲಯದಿಂದ ತಂದು ಮಾನ್ನಾನಮ್ ಆಶ್ರಮ ದೇವಾಲಯದಲ್ಲಿ ಸ್ಥಾಪಿಸಲಾಯಿತು. ಬದುಕಿರುವಾಗಲೇ ಒಬ್ಬ ಸಂತರೆಂದು ಪರಿಗಣಿಸಲ್ಪಟ್ಟಿದ್ದ ಧನ್ಯ ಚಾವರರವರು ಮರಣಾನಂತರ ತಮ್ಮ ಆಶ್ರಿತರಿಗೆ ಅನುಗ್ರಹ ವರ್ಷವನ್ನು ಸುರಿಸಿದರು. ಸಂತ ಅಲ್ಫೊ ೕನ್ಸಾರವರು ತಾನು ರೋಗಿಯಾಗಿದ್ದಾಗ ಧನ್ಯ ಚಾವರ ಅವರು ತನಗೆ

ದರ್ಶನ ನೀಡಿ ರೋಗವನ್ನು ಗುಣಪಡಿಸಿದ ಸಂಗತಿಯನ್ನು ಸಂತ ಅಲ್ಫೋನ್ಸಾರವರು ತನ್ನ ಸ್ವಂತ ದಿನಚರಿಯಲ್ಲಿ ಬರೆದಿಟ್ಟಿದ್ದಾರೆ. ಈ ಅದ್ಭುತ ಸಂಗತಿಯನ್ನು ಮಾನ್ನಾನದಲ್ಲಿರುವ ವಸ್ತು ಸಂಗ್ರಹಾಲಯ ದಲ್ಲಿ ಚಿತ್ರೀಕರಿಸಲಾಗಿದೆ. ಕೈನಕರಿ ಎಂಬ ಸ್ಥಳದಿಂದ ಉದಿಸಿದ ಚಾವರ ತಾರೆಯು ಉಜ್ವಲ ಜ್ಯೋತಿಯಾಗಿ ಬೆಳಗಲ್ಪಟ್ಟು ವಿವಿಧ ಕ್ಷೇತ್ರಗಳಲ್ಲಿ ತನ್ನ ಕಿರಣಗಳನ್ನು ಬೀರಿದ ಸಂಗತಿಗಳನ್ನು ಈ ವಸ್ತು ಸಂಗ್ರಹಾಲಯ ದಲ್ಲಿ ಚಿತ್ರೀಕರಿಸಲಾಗಿದ್ದು, ಅದು ನೂರಾರು ಭಕ್ತಾದಿಗಳನ್ನು ದಿನನಿತ್ಯ ಇಲ್ಲಿಗೆ ಆಕರ್ಷಿಸುತ್ತಿದೆ. ನೊವೇನಗಳನ್ನು ನಡೆಸಲಾಗುವ ಶನಿವಾರ ಗಳಲ್ಲಿ, ಮಾನ್ನಾನದಲ್ಲಿ ಭಕ್ತಾದಿಗಳ ಪ್ರವಾಹವನ್ನು ಕಾಣಬಹುದು. ಇಂದು ಕೈನಕರಿ ಮತ್ತು ಕೂನಮ್ಮಾವು ಪ್ರಸಿದ್ಧ ಪುಣ್ಯಕ್ಷೇತ್ರಗಳಾಗಿ ಮಾರ್ಪಟ್ಟಿದೆ.

ಧನ್ಯ ಚಾವರರವರನ್ನು ಸಂತರೆಂದು ಘೋಷಣೆ ಮಾಡುವ ಕಾರ್ಯಗಳನ್ನು 1956ರಲ್ಲಿ ಪ್ರಾರಂಭಿಸಲಾಯಿತು. 1986 ಫೆಬ್ರವರಿ ತಿಂಗಳ 8ರಂದು ಚಾವರ ಕುರಿಯಾಕೋಸ್ ಏಲಿಯಾಸ್ ರವರಿಗೆ ಕಥೋಲಿಕ ಧರ್ಮಸಭೆಯ ಜಗದ್ಗುರು ದಿವಂಗತ ಜೋನ್ ಪೋಲ್ ದ್ವಿತೀಯರು, 'ಪುನೀತ' ಎಂಬ ಪದವಿಯನ್ನು ದಯಪಾಲಿಸಿದರು. ಈ ದಿನವು ಭಾರತ ಧರ್ಮಸಭೆಗೆ ಒಂದು ಸುವರ್ಣ ದಿನವಾಗಿದೆ.

## ಪುನೀತ ಚಾವರ ಕುರಿಯಾಕೋಸ್ ಏಲಿಯಾಸ್ ರವರ ಜೀವನ ವಿವರ

| | | |
|---|---|---|
| ಜನನ | : | ಫೆಬ್ರವರಿ 10, 1805 |
| ಯಾಜಕಾಭಿಷೇಕ | : | ನವೆಂಬರ್ 29, 1829 |
| ಪ್ರಥಮ ಸನ್ಯಾಸ ವ್ರತ ಸಮರ್ಪಣೆ | : | ಡಿಸೆಂಬರ್ 8, 1855 |
| ಮರಣ | : | ಜನವರಿ 3, 1871 |
| ಭೂದಾನ | : | ಜನವರಿ 4, 1871 |
| ಪುನೀತ ಎಂಬ ಪದವಿ | : | ಫೆಬ್ರವರಿ 8, 1986 |
| ಭಾರತ ಸರ್ಕಾರದ ಅಂಚೆ ಸ್ಟ್ಯಾಂಪ್ | : | ಡಿಸೆಂಬರ್ 20, 1987 |

## ವಿಶಿಷ್ಟ ಸಾಧನೆಗಳು

ಫಾ|| ತೋಮಸ್ ಪಾಲಕ್ಕಲ್ , ಫಾ|| ತೋಮಸ್ ಪೋರೂಕ್ಕರ ಎಂಬ ಇಬ್ಬರು ಗುರುಗಳೊಡನೆ ಸೇರಿ ಪುರುಷರಿಗಾಗಿ ಭಾರತದ ಮೊತ್ತಮೊದಲ ದೇಶ್ಯ ಸನ್ಯಾಸ ಸಭೆಯ ಸ್ಥಾಪನೆ (ಸಿ.ಎಂ.ಐ ) - 1831

ಭಾರತ ಧರ್ಮಸಭೆಯಲ್ಲಿ ಪ್ರಥಮವಾಗಿ ಭಾನುವಾರದ ಸುವಾರ್ತಾ ಬೋಧನೆ, ಯಾಜಕರಿಗೆ ಮತ್ತು ಭಕ್ತಾದಿಗಳಿಗೆ ಧ್ಯಾನಕೂಟಗಳ ಪ್ರಾರಂಭ - 1831

ಭಾರತದ ಪ್ರಥಮ ಸೀರೋ ಮಲಬಾರ್ ಗುರುಮಠದ ಸ್ಥಾಪನೆ - 1833

ಸೀರೋ ಮಲಬಾರ್ ಸಭೆಯಲ್ಲಿ ಪ್ರಥಮವಾಗಿ ಶಿಲುಬೆಯ ಹಾದಿ ಪ್ರಾರ್ಥನೆಯ ಆರಂಭ – 1833

ಜಪಸರ ಭಕ್ತಿಯ ಪ್ರಚಾರ – 1833

ಸೀರೋ ಮಲಬಾರ್ ಸಭೆಯ ಪ್ರಥಮ ಪಾಠಶಾಲೆ – 1846

ಸೀರೋ ಮಲಬಾರ್ ಸಭೆಯ ಪ್ರಥಮ ಮುದ್ರಾಣಾಲಯ – 1846

ಸುವಾರ್ತೆ ಸಾರುವುದಕ್ಕಾಗಿ ಸ್ಥಾಪಿಸಿದ ಸೀರೋ ಮಲಬಾರ್ ಸಭೆಯ ಪ್ರಥಮ ಧರ್ಮೋಪದೇಶ ಕೇಂದ್ರ – 1853

ಭಾರತ ಕಥೋಲಿಕ ಧರ್ಮಸಭೆಯಲ್ಲಿ ಮೊತ್ತಮೊದಲ ಸನ್ಯಾಸ ವ್ರತ ಸಮರ್ಪಣೆ 1855

ಭಾರತದ ಪ್ರಥಮ ಸನ್ಯಾಸ ಸಭೆಯ ಮೊತ್ತ ಮೊದಲ ಶ್ರೇಷ್ಠಾಧಿಕಾರಿಗಳು – 1855

ಭಾರತದ ಸಿರಿಯನ್ ಕಥೋಲಿಕರ ಪ್ರಥಮ ವಿಕಾರ್ ಜನರಲ್ – 1861

ರೋಕೋಸ್ ದುರ್ಭೋದನೆ (ಶೀಷ್ಮ) ವಿರುದ್ಧ ಸಮರ – 1861

ಮಲಯಾಳಿ ಭಾಷೆಯಲ್ಲಿ ಪ್ರಥಮ ಮಹಾ ಕಾವ್ಯ "ಆನಸ್ತಾಸ್ಯಳ ರಕ್ತ ಸಾಕ್ಷ್ಯ" ರಚನೆ – 1862

"ಪ್ರತಿಯೊಂದು ದೇವಾಲಯದ ಜೊತೆ ಒಂದು ಪಾಠ ಶಾಲೆ" ಎಂಬ ಆಜ್ಞೆ ಹೊರಡಿಸಿದ್ದು – 1864

ಭಾರತದ ಪ್ರಪ್ರಥಮ ಸನ್ಯಾಸಿನಿ ಸಭೆ ಸ್ಥಾಪನೆ ( ಸಿ.ಎಂ.ಸಿ. ) – 1866

40 ಗಂಟೆಗಳ ಪರಮಪ್ರಸಾದ ಆರಾಧನೆ ಪ್ರಾರಂಭ – 1866

ಕ್ರಮ ಬದ್ದವಾದ ಆರಾಧನಾ ವಿಧಾನದ ಅನುಷ್ಠಾನ – 1869

ಸೀರೋ ಮಲಬಾರ್ ಸಭೆಯ ಮೊತ್ತಮೊದಲ ಸಮಾಜ ಕಲ್ಯಾಣ ಕೇಂದ್ರದ ಸ್ಥಾಪನೆ – 1899

## ಯುಗಪುರುಷ ಪುನೀತ ಚಾವರ ರವರ ವ್ಯಕ್ತಿವೈಭವ

ಧರ್ಮಸಭಾ ಸುಧಾರಣೆ, ಧಾರ್ಮಿಕ ಜೀವನ ಪುನರುಜ್ಜೀವನ, ಸುವಾರ್ತಾ ಬೋಧನೆ, ಕೌಟುಂಬಿಕ ಜೀವನ ನಡೆಸುತ್ತಿರುವವರಿಗೆ ಮಾರ್ಗದರ್ಶನ, ಯಾಜಕರಿಗೆ ತರಬೇತಿ, ಸಾರ್ವತ್ರಿಕ ವಿದ್ಯಾಭ್ಯಾಸ, ವೃದ್ಧಾಶ್ರಮ ಸ್ಥಾಪನೆ ಹೀಗೆ ಹತ್ತು ಹಲವು ಯೋಜನೆಗಳ ಹರಿಕಾರರಾಗಿ, ಜನಾನುರಾಗಿಯಾಗಿ ಒಬ್ಬ ಪ್ರವಾದಿಯಾಗಿ ಬಾಳಿದ ಧರ್ಮಪಾಲಕರಾಗಿದ್ದರು ಪುನೀತ ಚಾವರರವರು.

## ಪುನೀತ ಚಾವರರವರ ಕೌಟುಂಬಿಕ ಜೀವನ ದರ್ಶನ

ಧನ್ಯ ಚಾವರರವರ ಮರಣ ಶಾಸನದಲ್ಲಿ ಕುಟುಂಬ ಜೀವನ ನಡೆಸುವವರಿಗೆ ವಿಶೇಷ ಉಪದೇಶಗಳಿವೆ.

1. ಒಂದು ಉತ್ತಮ ಕ್ರೈಸ್ತ ಕುಟುಂಬವು ಸ್ವರ್ಗ ರಾಜ್ಯಕ್ಕೆ

ಸಮಾನವಾದುದು. ಅಲ್ಲಿರುವುದು ರಕ್ತ ಮತ್ತು ಪ್ರೀತಿಯ ಸಂಬಂಧ. ಕುಟುಂಬವಾಸಿಗಳು ಪರಸ್ಪರ ಪ್ರೀತಿ ಮತ್ತು ಗೌರವ ತೋರಿಸಬೇಕು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಉದ್ಯೋಗವನ್ನು ಗೌರವಿಸಬೇಕು. ಎಲ್ಲರೂ ಮೋಕ್ಷದ ಗುರಿಯನ್ನು ಮುಂದಿಟ್ಟು ಜೀವನ ಸಾಗಿಸಬೇಕು.

2. ಉತ್ತಮವಾಗಿ ಸಾಕಿ ಸಲಹಲು ತಂದೆ ತಾಯಿಗಳ ಕೈಗೆ ದೇವರು ಕೊಟ್ಟಿರುವ ಸಂಪತ್ತೇ ತಮ್ಮ ಮಕ್ಕಳು. ಯೇಸುಸ್ವಾಮಿಯ ದಿವ್ಯ ರಕ್ತದಿಂದ ಪವಿತ್ರೀಕರಿಸಿ ಉತ್ತಮ ಸೇವಕರನ್ನಾಗಿ ಮಾಡಿ ವಿಧಿ ದಿವಸದಲ್ಲಿ ದೇವರಿಗೆ ಮರಳಿಕೊಡಲು ದೇವರು ಒಪ್ಪಿಸಿರುವ ಆತ್ಮಗಳೇ ಮಕ್ಕಳು.

3. ಒಂದು ಕುಟುಂಬದ ಸದಸ್ಯರ ನಡುವಿನ ಪ್ರೀತಿಯ ಬೆಸುಗೆಯು ತುಂಬಾ ಆಳವಾಗಿದ್ದು, ಸುದೃಢವಾಗಿರಬೇಕು. ಹಾಗಿದ್ದರೆ ಕುಟುಂಬದಲ್ಲಿ ಪ್ರೀತಿ ಮತ್ತು ನೆಮ್ಮದಿ ಅನುಭವಿಸಲು ಸಾದ್ಯವಾಗುವುದು ಮತ್ತು ಜೀವನದಲ್ಲಿ ಉಂಟಾಗುವ ದುಃಖಗಳನ್ನು ನಿರಾಯಾಸವಾಗಿ ಎದುರಿಸಲು ಧೈರ್ಯ ಸಿಗುವುದು.

4. ಉತ್ತಮವಾದ ಕೌಟುಂಬಿಕ ವಾತಾವರಣದಲ್ಲಿ ಕ್ರಮಬದ್ಧ ಬದುಕು, ಶಾಂತಿಪಾಲನೆ ಹಾಗೂ ಆಧ್ಯಾತ್ಮಿಕತೆ ಕಂಡು ಬರುತ್ತದೆ. ಇಂತಹ ವಾತಾವರಣದ ಅಭಾವದಿಂದ ಹಲವು ಕುಟುಂಬಗಳು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದರೂ ಧಾರ್ಮಿಕವಾಗಿ ಕ್ಷಯಿಸಿ ಹೋಗುತ್ತಿರುವುದನ್ನು ಕಾಣುತ್ತೇವೆ.

5. ಪ್ರತಿಯೊಂದು ಕುಟುಂಬದಲ್ಲಿಯೂ ಸದಸ್ಯರ ನಡುವಿನ ಸಂಬಂಧದ ಅಡಿಪಾಯ ಪ್ರೀತಿಯೊಂದೇ ಆಗಿರಬೇಕು. ರಕ್ತ ಸಂಬಂಧದಿಂದ ರೂಪುಗೊಳ್ಳುವ ಈ ಪ್ರೀತಿಯೇ ಪರಸ್ಪರ ಗೌರವಿಸುವುದಕ್ಕೂ , ತಪ್ಪುಗಳನ್ನು ತಿದ್ದುವುದಕ್ಕೂ ಪ್ರೇರಣೆ ಯನ್ನು ನೀಡುವುದು. ಮನೆತನಗಳ ಮಧ್ಯೆ ಉದ್ಭವಿಸುವ ದ್ವೇಷದ ಕುಡಿಯನ್ನು ಮೊಳಕೆಯಲ್ಲೇ ಕಿತ್ತುಹಾಕಬೇಕು.

6. ನಿಮ್ಮ ಮಕ್ಕಳು ಚಿಕ್ಕವರಿರುವಾಗಲೇ ಅವರಿಗೆ ವಿನಯ ಮತ್ತು ಆತ್ಮ ನಿಯಂತ್ರಣದ ಪಾಠಗಳನ್ನು ಬೋಧಿಸಿ. ಮಿತಿಮೀರಿದ ಶಾರೀರಿಕ ಸೌಂದರ್ಯ ಪ್ರಜ್ಞೆ ಸಭ್ಯತೆಯಿಂದ ಕೂಡಿರದ ವಸ್ತ್ರಾಲಂಕಾರ ಆಪತ್ತನ್ನು ತಂದೊಡ್ಡುತ್ತದೆ.

7. ಉತ್ತಮ ಮೌಲ್ಯಗಳು ಹಾಗೂ ನೈತಿಕ ಪ್ರಜ್ಞೆಯನ್ನೊಳಗೊಂಡ ಪುಸ್ತಕಗಳನ್ನು ನಿಮ್ಮ ಮಕ್ಕಳಿಗೆ ಓದುವುದಕ್ಕಾಗಿ ಕೊಡಿ. ಅವರು ಅಶ್ಲೀಲ ಪುಸ್ತಕಗಳನ್ನು ಓದುತ್ತಿದ್ದಾರೆಯೇ ಎಂಬು ದನ್ನು ಗಮನಿಸಿಕೊಳ್ಳಿ. ಅಶ್ಲೀಲ ಪುಸ್ತಕಗಳನ್ನು ಕೈಯಲ್ಲಿಡು ವುದು ಒಣ ಹುಲ್ಲಿನಲ್ಲಿ ಬೆಂಕಿ ಕಿಡಿಯನ್ನು ಬಚ್ಚಿಡುವ ಹಾಗೆ.

8. ಮಕ್ಕಳನ್ನು ಚೆನ್ನಾಗಿ ಸಾಕಿ ಸಲಹುವುದರಲ್ಲಿ ಪೋಷಕರು ಪೂರ್ಣ ಗಮನಹರಿಸಬೇಕು. ಅವರನ್ನು ದೇವರ ಸನ್ನಿಧಿ ಯಲ್ಲಿ ಅರ್ಪಿಸಿ ಪ್ರತಿ ದಿನವೂ ಪ್ರಾರ್ಥಿಸಬೇಕು.

9. ಮಕ್ಕಳ ವಿದ್ಯಾಭ್ಯಾಸದಲ್ಲಿ ತಂದೆತಾಯಿಗಳು ಅತಿಯಾಗಿ ಗಮನಹರಿಸಬೇಕು. ಅವರ ಗೆಳೆತನಗಳು ದಾರಿ

ತಪ್ಪುತ್ತಿದೆಯೇ ಎಂಬುದನ್ನು ಆಗಾಗ ಗಮನಿಸುತ್ತಾ ಇರಬೇಕು.

10. ಮಕ್ಕಳನ್ನು ಶಿಕ್ಷಿಸುವಾಗ ಹಾಗೂ ಅವರ ಮೇಲೆ ತಪ್ಪು ಹೊರಿಸುವಾಗ ತಂದೆತಾಯಿಗಳು ವಿವೇಕವುಳ್ಳವರಾಗಿಬೇಕು.

11. ಚಿಕ್ಕಂದಿನಲ್ಲೇ ನಿಮ್ಮ ಮಕ್ಕಳಲ್ಲಿ ಪ್ರಾರ್ಥಿಸುವ ಅಭ್ಯಾಸ ಬೆಳೆಸಬೇಕು. ದೇವರಲ್ಲಿ ಆಳವಾದ ನಂಬಿಕೆಯಿಂದ ಅವರು ದೊಡ್ಡವರಾಗಿ ಬೆಳೆಯಲಿ.

12. ನಿಮ್ಮ ದಿನನಿತ್ಯದ ಚಟುವಟಿಕೆಗಳಿಗೆ ಒಂದು ನಿಖರತೆ, ಕ್ರಮಬದ್ಧತೆ ಇರಲಿ. ಅದು ಹೊಲಿಗೆ ಬಿಟ್ಟ ಪುಸ್ತಕದ ಹಾಳೆಯಂತೆ ಆಗದಿರಲಿ.

13. ಮಕ್ಕಳು ದೊಡ್ಡವರಾದಾಗ ಅವರು ತಮ್ಮ ಭವಿಷ್ಯವನ್ನು ನಿರ್ಧರಿಸಲು ತಂದೆತಾಯಿಗಳು ಅವರಿಗೆ ಸ್ವಾತಂತ್ರ್ಯವನ್ನು ನೀಡಬೇಕು.

14. ತಂದೆ ತಾಯಿಗಳು ತಮಗೆ ಮುಪ್ಪಾಗಿ ನೆನಪಿನ ಶಕ್ತಿ ಕ್ಷಯಿಸುವುದಕ್ಕೆ ಮುನ್ನ, ಸುಸ್ಥಿತಿಯಲ್ಲಿದ್ದಾಗಲೇ ಉಯಿಲನ್ನು ಬರೆದಿಡಿ, ಜೊತೆಗೆ ಆಸ್ತಿಯನ್ನೂ ಪಾಲು ಮಾಡಿಕೊಡಿ.

15. ಮಕ್ಕಳು ತಮ್ಮ ತಂದೆ ತಾಯಂದಿರನ್ನು ಯಾವಾಗಲೂ ಗೌರವಿಸಬೇಕು. ಅವರಿಗೆ ವಯಸ್ಸಾದಾಗಲೂ, ಅವರ ರೋಗಾವಸ್ಥೆಯಲ್ಲೂ ಅವರನ್ನು ತುಂಬಾ ಕಾಳಜಿಯಿಂದ ನೋಡಿಕೊಳ್ಳಬೇಕು. ಹಾಗಿದ್ದಲ್ಲಿ ನಿಮಗೆ ದೇವರ ಅನುಗ್ರಹ ಸಮೃದ್ಧವಾಗಿ ಉಂಟಾಗುವುದು.

16. ನಿಮ್ಮ ಪ್ರೀತಿ ಸಂಬಂಧಗಳು ವಿವೇಕದಿಂದ ಕೂಡಿರಲಿ, ಪ್ರಾಮಾಣಿಕ ಮತ್ತು ಧಾರ್ಮಿಕ ವ್ಯಕ್ತಿಗಳ ಜೊತೆ ಸಂಪರ್ಕ ಬೆಳೆಸಿಕೊಳ್ಳಿ.

17. ಸೇಡು ತೀರಿಸಿಕೊಳ್ಳುವಂತೆ ಇತರರೊಡನೆ ವರ್ತಿಸುವುದು ಮೃಗೀಯವಾದ ಸ್ವಭಾವ, ಮಾನವನ ಮನಸ್ಸಿನ ಹಿರಿಮೆಯು ಅವನ ವಿವೇಕದಲ್ಲಿ ಮತ್ತು ಕ್ಷಮೆಯಲ್ಲಿ ಅಡಕವಾಗಿರುತ್ತದೆ.

18. ನಿನ್ನ ಸಹೋದರರ ಮತ್ತು ಕುಟುಂಬದವರ ವಿರುದ್ಧ ದೂರನ್ನು ನ್ಯಾಯಾಲಯಕ್ಕೂ ನ್ಯಾಯಾಧೀಶರ ಕಡೆಗೂ ಕೊಂಡೊಯ್ಯಬೇಡ. ಏಕೆಂದರೆ ಅದು ನಿಮ್ಮ ಹೃದಯಗಳ ಅಂತರ ಹೆಚ್ಚಿಸಿ, ಬಿರುಕುಗಳನ್ನುಂಟುಮಾಡುವುದು.

19. ಇತರರಿಂದ ಸಾಲ ಪಡೆದುಕೊಂಡು ಹೇರಳವಾಗಿ ಖರ್ಚು ಮಾಡಬೇಡ. ಅದು ನಿನ್ನ ಮುಂದಿನ ಪೀಳಿಗೆಗೂ ದೊಡ್ಡ ಭಾರವಾಗಬಹುದು.

20. ನೀನು ಶ್ರೀಮಂತನಾಗಿದ್ದರೆ ಅದನ್ನು ಡಂಗುರ ಭಾರಿಸಿ ಎಲ್ಲರಿಗೂ ತಿಳಿಸಬೇಡ. ಅತೀ ವಿನಯ ಭಾವದಿಂದ ಬದುಕಲು ಯತ್ನಿಸು. ಮದುವೆ ಮುಂತಾದ ಗಳಿಗೆಗಳನ್ನು ಅನವಶ್ಯಕವಾದ ಆಡಂಬರಗಳಿಂದ ಸಂಭ್ರಮಗೊಳಿಸಬೇಡ. ಒಣ ಹುಲ್ಲಿನ ಗಂಟಿಗೆ ಹರಡಿಕೊಂಡ ಬೆಂಕಿ ಕೆಲವೇ ನಿಮಿಷಗಳು ಮಾತ್ರ ಹೊತ್ತಿ ಉರಿಯುವುದು. ಆದರೆ

ಒಂದು ಸಣ್ಣ ದೀಪದ ಜ್ವಾಲೆಯು ನಿರಂತರ ಬೆಳಗುತ್ತಿರುವುದು ಮತ್ತು ಶ್ರೇಷ್ಠವಾದುದು.

21. ಆಡಂಬರ ಜೀವನದಂತೆ ದ್ರವ್ಯಾಗ್ರಹ ಹಾಗೂ ಜುಪುಣತನ ಒಳ್ಳೆಯದಲ್ಲ. ಸಂಪತ್ತನ್ನು ಹೂಳಿಡಬೇಡ. ಅದನ್ನು ಮಾನವ ಕ್ಷೇಮಕ್ಕಾಗಿ ಸದುಪಯೋಗ ಪಡಿಸಿಕೊಳ್ಳಬೇಕು. ಇಲ್ಲದಿದ್ದಲ್ಲಿ ಅಧಾರ್ಮಿಕತೆ ನಿಮ್ಮಲ್ಲಿ ತುಂಬುವುದು.

22. ನೀವು ದೇವರಲ್ಲಿ ನಂಬಿಕೆ ಹಾಗೂ ನಿಷ್ಠೆ ಇರುವವರೊಡನೆ ಕೌಟುಂಬಿಕ ಸಂಬಂಧ ಬೆಳೆಸಿಕೊಳ್ಳಿ. ಶ್ರೀಮಂತಿಕೆ ಮತ್ತು ಆರ್ಥಿಕ ಲಾಭಗಳು ನಿಮ್ಮ ಮಾನದಂಡ ವಾಗದಿರಲಿ.

23. ನಿಮ್ಮ ಕುಟುಂಬಗಳಲ್ಲಿ ದುಡಿಮೆಯ ಅಭ್ಯಾಸ ಯಾವಾಗಲೂ ಇರಲಿ. ಉದಾಸೀನತೆಯಿಂದ ಕಾಲವ್ಯಯ ಮಾಡಬೇಡಿ. ಅದು ನಿಮ್ಮ ಕುಟುಂಬವನ್ನು ಶಿಥಿಲಗೊಳಿಸುವುದು.

24. ದುಂದುವೆಚ್ಚ, ಸ್ತ್ರೀ ವ್ಯಾಮೋಹ, ಕುಡುಕತನ, ಧೂಮಪಾನ ಮತ್ತು ಇತರ ದುರಭ್ಯಾಸದ ಮಹಾ ಕೆಡುಕುಗಳು ನಿಮ್ಮ ಬಾಳಿನಲ್ಲಿ ಮತ್ತು ನಿಮ್ಮ ಮನೆಯಲ್ಲಿ ಕಾಲಿಡದಿರಲಿ. ನಿಮ್ಮ ಸಂಪತ್ತನ್ನೆಲ್ಲಾ ಅದು ಕರಗಿಸುವುದು.

25. ಹಣಕಾಸಿನ ವಹಿವಾಟು ಹಾಗೂ ವ್ಯಾಪಾರಗಲ್ಲಿ ಪ್ರಾಮಾಣಿಕತೆಯಿರಲಿ. ಕಳ್ಳತನ, ಸುಲಿಗೆ ಹಾಗೂ ಮೋಸದಿಂದ ಸಂಪಾದಿಸುವ ಸಂಪತ್ತು ಮಂಜು ಕರಗುವಂತೆ

ಕ್ಷಣದಲ್ಲಿ ಮಾಯವಾಗುವುದು.

26. ಇತರರಿಗಾಗಿ ಏನಾದರೂ ಒಂದು ಸಹಾಯವನ್ನು ಮಾಡದ ದಿನವು ನಿಮ್ಮ ಬಾಳಿನಲ್ಲಿ ಇರಕೂಡದು. ಅಂಥಹ ದಿನಗಳನ್ನು ದೇವರು ನಿಮ್ಮ ಆಯುಸ್ಸಿನಿಂದ ತೆಗೆದು ಹಾಕುವರು. ಭಿಕ್ಷುಕರು ಮನೆಗೆ ಬಂದಾಗ ಅವರನ್ನು ಬರಿಗೈಯಲ್ಲಿ ಹಿಂದಕ್ಕೆ ಕಳುಹಿಸಬೇಡಿ.

27. ನಿಮ್ಮ ಕೆಲಸದಾಳುಗಳಿಗೆ ನ್ಯಾಯವಾದ ವೇತನ ಕೊಡಿ. ಬಡವರನ್ನೂ, ಬಲಹೀನರನ್ನೂ ನಿಂದಿಸಬೇಡಿ. ಏಕೆಂದರೆ ಅವರ ಕಣ್ಣೀರು ನಿಮ್ಮ ವಿರುದ್ಧ ದೇವರ ಮುಂದೆ ಸಲ್ಲುವುದು.

28. ನಿಮ್ಮ ಮನೆಮನಗಳಲ್ಲಿ ಅಮರ ಜ್ಯೋತಿ ಬೆಳಗಲು ಸಹಾಯಕವಾಗುವ ಒಂದು ಸಿದ್ಧೌಷಧವಿದೆ. ಅದೇ ದಿವ್ಯ ಬಲಿಪೂಜೆ ಮತ್ತು ಪರಮ ಪ್ರಸಾದ. ಆದುದರಿಂದ ಪ್ರತಿದಿನ ಮನೆಯವರಲ್ಲಿ ಒಬ್ಬರಾದರೂ ದಿವ್ಯಬಲಿಪೂಜೆಯಲ್ಲಿ ಭಾಗವಹಿಸಿ ಪರಮ ಪ್ರಸಾದ ಸ್ವೀಕರಿಸುವುದು ಅತೀ ಅವಶ್ಯಕ.

29. ಭಾನುವಾರಗಳಲ್ಲಿ ಮತ್ತು ಹಬ್ಬದ ದಿನಗಳಲ್ಲಿ ಕೇವಲ ಬಲಿಪೂಜೆಯಲ್ಲಿ ಪಾಲುಗೊಳ್ಳುವುದು ಮಾತ್ರ ಸಾಲದು. ಆ ದಿನಗಳನ್ನು ಒಳ್ಳೆಯ ಕಾರ್ಯಗಳನ್ನು ಮಾಡುವುದಕ್ಕೂ , ಒಳ್ಳೆಯ ಪುಸ್ತಕಗಳನ್ನು ಓದುವುದಕ್ಕೂ, ದೇವರ ವಾಕ್ಯವನ್ನು ಆಲಿಸುವುದಕ್ಕೂ ಉಪಯೋಗಿಸಿ. ಬಡವರ ಮತ್ತು

ರೋಗಿಗಳ ಮನೆಗೆ ಭೇಟಿಕೊಟ್ಟು ಅವರಿಗೆ ನಿಮ್ಮ ಕೈಲಾದ ಸಹಾಯ ಮಾಡಿ. ನಿಮ್ಮ ಆತ್ಮರಕ್ಷೆಗೆ ಬೇಕಾದುದನ್ನು ಒದಗಿಸುವ ದಿನಗಳೇ ಇವು ಎಂದು ಅರಿತುಕೊಳ್ಳಿ.

30. ನಿಮ್ಮ ಮನೆಯಲ್ಲಿ ಎಷ್ಟೇ ವಿಶೇಷ ಅತಿಥಿಗಳಿದ್ದರೂ, ನಿಮ್ಮ ಕುಟುಂಬ ಪ್ರಾರ್ಥನೆಯನ್ನು ಬದಿಗಿಡಬೇಡಿ. ಪ್ರತಿದಿನ ನಿಶ್ಚಿತ ವೇಳೆಯಲ್ಲೇ ಸಂಧ್ಯಾ ಪ್ರಾರ್ಥನೆಯನ್ನು ನಡೆಸಿ. ನಿಮ್ಮ ಈ ಪ್ರಾರ್ಥನೆ ಹಾಗೂ ನಿಷ್ಠೆಯ ಬದುಕು ಇತರರಿಗೆ ಒಂದು ಪಾಠವಾಗಲಿ.

## ಧನ್ಯ ಚಾವರ ರವರನ್ನು ಸಂತರ ಗಣಕ್ಕೆ ಸೇರಿಸಲು ಕೋರಿಕಾ ಪ್ರಾರ್ಥನೆ

ಆತೀ ಪ್ರೀತಿಯ ಯೇಸುವೇ ನಿಮ್ಮ ಪ್ರಿಯ ದಾಸರಾದ ಧನ್ಯ ಚಾವರರವರನ್ನು ಪುನೀತರ ಗಣಕ್ಕೆ ಸೇರಿಸಿದ ಕಾರಣಕ್ಕಾಗಿ ನಾವು ನಿಮ್ಮನ್ನು ವಂದಿಸುತ್ತೇವೆ. ನಿಮ್ಮ ಸ್ತುತಿಗೂ ಧರ್ಮಸಭೆಯ ಮಹಿಮೆಗೂ, ಆತ್ಮಗಳ ರಕ್ಷಣೆಗೂ ಸಹಾಯಕವಾಗುವುದಾದರೆ ನಿಮ್ಮ ಪ್ರಿಯ ದಾಸರಾದ ಧನ್ಯ ಕುರಿಯಾಕೋಸ್ ಏಲಿಯಾಸ್ ಚಾವರ ರವರಿಗೆ ಸಂತರ ಪದವಿ ನೀಡಿ ಅನುಗ್ರಹಿಸಿರಿ.

ಪಿತ ದೇವರೇ, ಇಂದು ಈ ಪ್ರಪಂಚದಲ್ಲಿ ಅರ್ಪಿಸಲಾಗುತ್ತಿರುವ ಸಕಲ ದಿವ್ಯ ಬಲಿಪೂಜೆಗಳನ್ನು ಈ ಉದ್ದೇಶಕ್ಕಾಗಿ ನಾವು ಪರಿಶುದ್ಧ ಮಾತೆಯ ನಿರ್ಮಲ ಹೃದಯದ ಮೂಲಕ ನಿಮಗೆ ಕಾಣಿಕೆಯಾಗಿ ಅರ್ಪಿಸುತ್ತಿದ್ದೇವೆ.

ಪರಿಶುದ್ಧ ನಿರ್ಮಲ ಮಾತೆಯೇ, ಸಂತ ಜೋಸೆಫರೇ,

ಕುರಿಯಾಕೋಸ್ ಏಲಿಯಾಸ್‌ರವರ ಮಹತ್ವೀಕರಣಕ್ಕಾಗಿ ತ್ರಿಯೇಕ ದೇವರ ಮುಂದೆ ಮಧ್ಯಸ್ಥಿಕೆ ವಹಿಸಿರಿ.

ಭಾರತದ ಅಪಸ್ತೋಲರಾದ ಸಂತ ತೋಮಸರೇ, ಸಂತ ಫ್ರಾನ್ಸಿಸ್ ಕ್ಸೇವಿಯರ್‌ರವರೇ, ನಮ್ಮ ಈ ಯಾಚನೆಯನ್ನು ದೇವರ ಸನ್ನಿಧಿಗೊಪ್ಪಿಸಿರಿ. ಆಮೆನ್.

1 ಪರ 1 ನಮೋ 1 ಪಿತನಿಗೂ

## ಮಧ್ಯಸ್ಥಿಕೆ ಪ್ರಾರ್ಥನೆ

ಭಾರತ ಧರ್ಮಸಭೆಗೆ ನವಚೇತನವನ್ನು ನೀಡಲು ದೇವರಿಂದಲೇ ಆಯ್ಕೆಯಾದ ಧನ್ಯ ಕುರಿಯಾಕೋಸ್ ಏಲಿಯಾಸ್ ಚಾವರರವರೇ, ಮಕ್ಕಳಾದ ನಾವು ನಿಮಗೆ ನಮಿಸುತ್ತಿದ್ದೇವೆ. ದೇವರ ಕೃಪಾವರವು ನಿಮ್ಮಲ್ಲಿ ಸ್ವಲ್ಪವೂ ನಶಿಸಿಹೋಗದೇ, ಸಂತ ಪೌಲರಂತೆ ದೇವರ ಚಿತ್ತಕ್ಕನುಗುಣವಾಗಿ ನಡೆದು ದೇವರ ಪ್ರೀತಿ ಮತ್ತು ಮೆಚ್ಚುಗೆಗೆ ನೀವು ಪಾತ್ರರಾದಿರಿ. ಹಾಗೆಯೇ ದೇವರಿಗೆ ಮಹಿಮೆ ಯುಂಟಾಗಲು, ಆತ್ಮಗಳ ರಕ್ಷಣೆಗೆ ಸಹಾಯಕವಾಗುವ ಅನೇಕ ಕಾರ್ಯಗಳನ್ನು ನಿರ್ವಹಿಸಲು ನಿಮಗೆ ದೇವರು ಶಕ್ತಿ ನೀಡಿದರು. ನಿಮ್ಮ ಆತ್ಮವನ್ನು ವಿಶಿಷ್ಟವಾದ ಪುಣ್ಯಗಳಿಂದ ಅಲಂಕರಿಸಿ ಸ್ವರ್ಗ ಸೌಭಾಗ್ಯವನ್ನು ನಿಮಗೆ ದಯಪಾಲಿಸಲು ಕಾರಣರಾದರು. ಇದಕ್ಕೆ ನಿಮ್ಮೊಡನೆ ಸೇರಿ ನಾವೂ ದೇವರಿಗೆ ಸ್ತುತಿಸ್ತೋತ್ರಗಳನ್ನರ್ಪಿಸುತ್ತೇವೆ.

ನಿಮ್ಮ ಮಕ್ಕಳಾದ ನಾವು ದೇವರಲ್ಲಿ ಭಕ್ತಿ ಮತ್ತು ನಿಷ್ಠೆಯುಳ್ಳವರಾಗಿ ಬೆಳೆಯುವಂತೆ ಕರುಣಿಸಿರಿ. ಸದಾ ಕಾಲವೂ ದೇವರ ಚಿತ್ತಕ್ಕನುಗುಣವಾಗಿ ಬಾಳಿ ಆತ್ಮ ರಕ್ಷಣೆಗಾಗಿ ತೀವ್ರ

ಆಸಕ್ತಿಯಿಂದ ದುಡಿಯಲು ಬೇಕಾದ ವರವನ್ನು ಕರುಣಿಸಿರಿ. ಅದರೊಂದಿಗೆ ನಾವು ಈಗ ವಿಶೇಷವಾಗಿ ಬೇಡುವ ಅನುಗ್ರಹಗಳನ್ನೂ ............ ದೇವರಿಂದ ಪಡೆಯುವಂತೆ ನಿಮ್ಮಲ್ಲಿ ಮೊರೆಯಿಡುತ್ತೇವೆ. ಆಮ್ಮೇನ್.

1 ಪರ, 1 ನಮೋ, 1ಪಿತನಿಗೂ

## ಸನ್ಯಾಸಿ ಸನ್ಯಾಸಿನಿಯರಿಗಾಗಿ ಪ್ರಾರ್ಥನೆ

ಸರ್ವಶಕ್ತರಾದ ಪಿತದೇವರೇ ನಿಮ್ಮ ಪ್ರಿಯಸುತ ಹಾಗೂ ಲೋಕರಕ್ಷಕರಾದ ಯೇಸುಸ್ವಾಮಿಯರನ್ನು ಹೆಚ್ಚು ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಹಿಂಬಾಲಿಸಲು ಜೀವನವನ್ನೇ ಮುಡಿಪಾಗಿಟ್ಟಿರುವ ಎಲ್ಲಾ ಸನ್ಯಾಸಿ ಸನ್ಯಾಸಿನಿಯರನ್ನು ಸಮೃದ್ಧವಾಗಿ ಅನುಗ್ರಹಿಸಿರಿ. ತ್ಯಾಗದಿಂದ ಕೂಡಿದ ಅವರ ಆತ್ಮಾರ್ಪಣೆಯು ಅವರಿಗೆ ಪರಿಶುದ್ಧ ಬದುಕನ್ನು ನಡೆಸಲು ಶಕ್ತಿ ನೀಡಲಿ. ಅವರಲ್ಲಿ ಅಡಗಿರುವ ದೈವೀಕ ಪ್ರೀತಿಯಿಂದ ಅವರು ದೇವರಿಗೆ ಮತ್ತು ಸಮಾಜಕ್ಕೆ ಪ್ರಾಮಾಣಿಕ ಸೇವೆಯನ್ನು ಮಾಡುವಂತಾಗಲಿ.

ಬ್ರಹ್ಮಚರ್ಯ ವ್ರತದ ಧೀರ ಪ್ರೇಮದ ಮೂಲಕ, ದಾರಿದ್ರ್ಯ ವ್ರತದ ಸರಳ ಜೀವನದ ಮೂಲಕ, ವಿಧೇಯತೆ ವ್ರತದ ಮೂಲಕ ಅವರು ನಿಮ್ಮ ಪ್ರಿಯ ಸುತರ ಆತ್ಮಾರ್ಪಣೆಯಲ್ಲಿ ಪಾಲುಗಾರರಾಗಲಿ.

ಕರ್ತರಾದ ದೇವರೇ ಎಲ್ಲಾ ಅರ್ಪಿತರು ನಿಮ್ಮ ಕರುಣೆ, ಪ್ರೀತಿ ಮತ್ತು ಶಾಂತಿಯ ದೂತರಾಗಿ ಬಾಳಲು ಬೇಕಾದ ಅನುಗ್ರಹ ಕರುಣಿಸಿರಿ. ತ್ಯಾಗದಿಂದ ಕೂಡಿದ ಅವರ ಆತ್ಮಾರ್ಪಣೆಯು

ಪ್ರಾಮಾಣಿಕವಾದ ಜೀವನ ನಡೆಸಲು ಅವರಿಗೆ ಶಕ್ತಿ ನೀಡಲಿ. ಅವರಲ್ಲಿರುವ ದೈವಭಕ್ತಿಯು ಪರರನ್ನು ಪ್ರೀತಿಸಲು ಅವರಿಗೆ ಉತ್ತೇಜನ ನೀಡಲಿ. ಹೀಗೆ ಅವರ ಜೀವನ ಧರ್ಮಸಭೆಯ ಮತ್ತು ಲೋಕದ ಉದ್ಧಾರಕ್ಕೆ ಕಾರಣವಾಗಲಿ ಆಮ್ಮೇನ್.

## ವಿದ್ಯಾರ್ಥಿಗಳಿಗಾಗಿ ಪ್ರಾರ್ಥನೆ

ಸರ್ವಜ್ಞಾನಿಯಾದ ಪಿತ ದೇವರೇ ನೀವು ಜ್ಞಾನ ಮತ್ತು ಬುದ್ಧಿಯ ಆಗರವಾಗಿದ್ದೀರಿ. ಎಲ್ಲಾ ಜ್ಞಾನಗಳ ಮತ್ತು ವಿದ್ಯೆಯ ಪ್ರಾರಂಭವೂ ಪೂರ್ಣತೆಯೂ ನಿಮ್ಮಲ್ಲಿಯೇ ಎಂಬುದನ್ನು ನಾನು ನಂಬುತ್ತೇನೆ. ನನಗೆ ನೀವು ದಯಪಾಲಿಸಿದ ಪ್ರತಿಭೆ ಜ್ಞಾನ ಮತ್ತು ಬುದ್ಧಿಗಾಗಿ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ನನ್ನ ಮನವನ್ನು ನಿಮ್ಮ ಪ್ರತಿಭೆಯಿಂದ ಬೆಳಗಿರಿ. ನನ್ನ ನೆನಪಿನ ಶಕ್ತಿಯನ್ನು ವೃದ್ಧಿಗೊಳಿಸಿರಿ. ಕಲಿಕೆಯಲ್ಲಿ ನನಗೆ ಹೆಚ್ಚು ಏಕಾಗ್ರತೆಯನ್ನು ನೀಡಿರಿ. ನಾನು ಪರೀಕ್ಷೆ ಬರೆಯಲು ಹೋಗುವ ಸಂದರ್ಭದಲ್ಲಿ ನಾನು ಕಲಿತು ಗ್ರಹಿಸಿಕೊಂಡಿರುವ ಉತ್ತರಗಳನ್ನು ಕ್ರಮವಾಗಿ ಜ್ಞಾಪಿಸಿಕೊಂಡು ಚೆನ್ನಾಗಿ ಪರೀಕ್ಷೆ ಬರೆಯಲು ನನಗೆ ಸಾಧ್ಯವಾಗಲಿ. ಪರೀಕ್ಷೆಯ ಸಂದರ್ಭದಲ್ಲಿ ಉಂಟಾಗುವ ಭಯ ಮತ್ತು ನಿರಾಸೆಯನ್ನು ನನ್ನಿಂದ ತೊಲಗಿಸಿರಿ. ವಿಷಮ ಪರಿಸ್ಥಿಗಳನ್ನು ಆತ್ಮವಿಶ್ವಾಸ ಮತ್ತು ಧೈರ್ಯ ದಿಂದ ಎದುರಿಸಲು ಶಕ್ತಿ ನೀಡಿರಿ.

ಪಿತನಾದ ದೇವರೇ ನೀವು ನನಗೆ ದಯಪಾಲಿಸಿರುವ ಎಲ್ಲಾ ಪ್ರತಿಭೆಗಳಿಗಾಗಿ ನಾನು ನಿಮಗೆ ಕೃತಜ್ಞತೆ ಸಲ್ಲಿಸುತ್ತೇನೆ. ನನ್ನಲ್ಲಿರುವ ಪ್ರತಿಭೆಗಳನ್ನು ಗುರುತಿಸಿ ಅವುಗಳನ್ನು ಪೋಶಿಸಿ ಬೆಳೆಸಲು ಶಕ್ತಿ

ನೀಡಿರಿ. ನನ್ನ ಅಂತರಂಗದಲ್ಲಿರುವ ನಿಮ್ಮ ಸಾನ್ನಿಧ್ಯವು ನನಗೆ ಸದಾ ಸ್ಫೂರ್ತಿ ನೀಡಲಿ. ನನ್ನ ಎಲ್ಲಾ ಕಲಿಕೆ, ವಿದ್ಯೆ ಮತ್ತು ಪ್ರತಿಭೆಗಳು ನಿಮಗೆ ಮಹಿಮೆಯನ್ನು ಮತ್ತು ಇತರರಿಗೆ ಸುಖ ಶಾಂತಿ ತರಲು ಸಹಾಯಕವಾಗಲಿ. ಬೆಳಗುವ ಒಂದು ಪುಟ್ಟ ಹಣತೆಯಂತೆ ಈ ನನ್ನ ಬಾಳು ಇತರರ ಮುಂದೆ ಪ್ರಜ್ವಲಿಸಲಿ.

ಕರುಣಾಮಯ ದೇವರೇ ನನ್ನ ಹೆತ್ತವರನ್ನೂ, ಸಹೋದರ ಸಹೋದರಿಯರನ್ನೂ, ವಿದ್ಯೆ ಹೇಳಿಕೊಟ್ಟ ಗುರುಗಳನ್ನೂ, ನನ್ನ ಗೆಳೆಯರನ್ನೂ ಅನುಗ್ರಹಿಸಿರಿ. ನನ್ನ ಸಹಪಾಠಿ ಗಳೆಲ್ಲರನ್ನೂ ಅನುಗ್ರಹಿಸಿರಿ.

ವಿದ್ಯಾರ್ಥಿಗಳ ಮಿತ್ರರಾದ ಧನ್ಯ ಚಾವರರವರೇ ನನಗಾಗಿ ಪ್ರಾರ್ಥಿಸಿರಿ.

## ಧನ್ಯ ಚಾವರ ಕುರಿಯಾಕೋಸ್ ಏಲಿಯಾಸ್ ರವರ ಕಿರು ನೊವೇನ

ಚಾವರ ಧನ್ಯಾತ್ಮರೇ ಯೇಸುಸ್ವಾಮಿಯರನ್ನು ಅತೀ ಸಮೀಪ ದಿಂದ ಹಿಂಬಾಲಿಸುವುದರ ಮೂಲಕ ನೀವು ನಮಗೆ ಒಂದು ಉತ್ತಮ ಮಾದರಿಯನ್ನು ತೋರಿದ್ದೀರಿ. ನಿಮ್ಮ ಪ್ರಾಮಾಣಿಕ ದುಡಿಮೆ ಯಿಂದ ನೀವು ಸೀರೋಮಲಬಾರ್ ಧರ್ಮಸಭೆಯನ್ನು ಸಂರಕ್ಷಿಸಿದಿರಿ. ಧರ್ಮಸಭೆಯ ಪುನರುಜ್ಜೀವನಕ್ಕಾಗಿ ಪುರುಷರಿಗೆ ಮತ್ತು ಕನ್ಯಾ ಸಹೋದರಿಯರಿಗೆ, ಸನ್ಯಾಸ ಸಭೆಗಳನ್ನು ಸ್ಥಾಪಿಸಿದಿರಿ. ಕ್ರೈಸ್ತ ಕುಟುಂಬ ಗಳು ದೇವರಲ್ಲಿ ಆಳವಾದ ನಂಬಿಕೆಯನ್ನಿಟ್ಟು ಉತ್ತಮ ಧಾರ್ಮಿಕ ಜೀವನ ನಡೆಸಲು ನೀವು ಮಾರ್ಗದರ್ಶನ ನೀಡಿದಿರಿ. ಯಾಜಕರಿಗೂ ಉತ್ತಮ ತರಬೇತಿ ಗುರುಮಠಗಳನ್ನು ಪ್ರಾರಂಭಿಸಿದಿರಿ.

ಎಲ್ಲಕ್ಕಿಂತ ಮಿಗಿಲಾಗಿ ನಿಮ್ಮ ನಡೆನುಡಿಗಳನ್ನು ಹಾಗೂ ಧರ್ಮಕಾರ್ಯಗಳನ್ನು ದೇವರಿಗೆ ನೈವೇದ್ಯವಾಗಿ ಅರ್ಪಿಸಿದಿರಿ. ಸುವಾರ್ತೆಯ ಮೌಲ್ಯಗಳನ್ನು ಸ್ವಂತ ಜೀವನದಲ್ಲಿ ಪ್ರಾಮಾಣಿಕವಾಗಿ ಅಳವಡಿಸಿಕೊಂಡು ಸಕಲರಿಗೂ ಚೈತನ್ಯವನ್ನು ಕೊಡುವ ಒಬ್ಬ ಮಾದರಿ ದಾಸನಾಗಿ ನಿಮ್ಮನ್ನೇ ದೇವರಿಗೆ ಒಪ್ಪಿಸಿದಿರಿ.

ಪುನೀತರೇ, ನಿಮ್ಮಂತೆ ನಾವು ಯೇಸುಸ್ವಾಮಿಯನ್ನು ಸದಾ ಹಿಂಬಾಲಿಸಲು ಶಕ್ತಿಯನ್ನು ನೀಡುವಂತೆ ನಮಗಾಗಿ ದೇವರ ಸನ್ನಿಧಿ ಯಲ್ಲಿ ಬೇಡಿಕೊಳ್ಳಿರಿ. ಹಾಗೆಯೇ ನಾವು ಇಂದು ಸಲ್ಲಿಸುವ ಈ ಮನವಿಯನ್ನು .................. ದೇವರು ಸ್ವೀಕರಿಸಿ ಕರುಣಿಸು ವಂತೆ ಪ್ರಾರ್ಥಿಸಿರಿ. ಆಮೆನ್.